Gender and Curriculum

ಲಿಂಗತ್ವ ಮತ್ತು ಪಠ್ಯಕ್ರಮ

ದೀಪ್ತಾ ಭೋಗ್

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (ಎನ್ ಸಿ ಎಫ್) ಸರ್ವರಿಗೂ ಸಮಾನತೆ, ಮೂಲಭೂತ ಹಕ್ಕುಗಳು ಮತ್ತು ಗುಣಮಟ್ಟದ ಶಿಕ್ಷಣ ದೊರೆಯಬೇಕು ಎಂದು ಪುನರುಚ್ಚರಿಸುತ್ತಲೇ ಇರುವುದಾದರೂಶಿಕ್ಷಣದಲ್ಲಿ ಭಾರತೀಯ ಪರಂಪರೆ, ಮೌಲ್ಯ ಶಿಕ್ಷಣ ಮತ್ತು ಧಾರ್ಮಿಕ ಶಿಕ್ಷಣಗಳಿಗೆ ಒತ್ತು ನೀಡುವ ಉಪಕ್ರಮದಿಂದಾಗಿ ಶಿಕ್ಷಣವು ಮಹಿಳಾ ಸಬಲೀಕರಣವನ್ನು ಸಶಕ್ತಗೊಳಿಸುವ ಸಾಧನವಾಗಿ ಹೊರಹೊಮ್ಮುವ ಸಾಧ್ಯತೆಗೆ ಅಡಚಣೆ ಉಂಟು ಮಾಡಿದೆ. ಈ ಲೇಖನವು ಮಹಿಳಾ ಶಿಕ್ಷಣಕ್ಕೆ ಸಂಬಂಧಿಸಿದಂತೆ 1986ರ ಹೊಸ ಶಿಕ್ಷಣ ನೀತಿಯ ಮುನ್ನೋಟ ಮತ್ತು ನೀತಿ ಚೌಕಟ್ಟನ್ನು ಸಂಕ್ಷಿಪ್ತವಾಗಿ ಮರು ಪರಿಶೀಲಿಸುತ್ತಾ, ಶಾಲಾ ಪಠ್ಯಪುಸ್ತಕಗಳ ವಾಸ್ತವಿಕ ಬರವಣಿಗೆಯ, ನಿರ್ದಿಷ್ಟವಾಗಿ ಭಾಷಾ ಬೋಧನೆಗೆ ಸಂಬಂಧಿಸಿದ ಬರವಣಿಗೆಯ ಪ್ರಗತಿಪರ ನೀತಿ ಎಂಬ ಪರಿಕಲ್ಪನೆಯ ಪರಿಣಾಮವನ್ನು ವಿಶ್ಲೇಷಿಸುತ್ತದೆ.

ನವೆಂಬರ್ 14, 2000 ರಂದು ಸರ್ಕಾರವು ಪರಿಚಯಿಸಿದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಸಮಾಜ ವಿಜ್ಞಾನ ಪಠ್ಯಪುಸ್ತಕಗಳಲ್ಲಿನ ವಿಷಯದ ಬಗ್ಗೆ ಸಾಕಷ್ಟು ಚರ್ಚೆ ಮತ್ತು ವಿವಾದವನ್ನು ಹುಟ್ಟುಹಾಕಿದೆ. ಇನ್ನಷ್ಟು ನಿರ್ದಿಷ್ಟವಾಗಿ ಹೇಳುವುದಾದರೆ, ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಇತಿಹಾಸದ ಕೋಮುವಾದ ಮತ್ತು ಬ್ರಾಹ್ಮಣಿಕೆಯ ದೃಷ್ಟಿಕೋನವನ್ನು ಅಳವಡಿಸಿಕೊಂಡು ಅಧಿಕಾರಿಶಾಹಿತ್ವ ಮತ್ತು ರಾಜಕೀಯ ಹಸ್ತಕ್ಷೇಪದ ಮೂಲಕ ಐತಿಹಾಸಿಕ ವಿಶ್ಲೇಷಣಾ ವಿಧಾನವನ್ನು ಗಂಭೀರವಾಗಿ ನಿರ್ಲಕ್ಷಿಸಿದೆ ಎಂಬ ಆರೋಪ ಕೇಳಿಬರುತ್ತಿದೆ. ಇತಿಹಾಸದ ಪ್ರಶ್ನೆ ಮತ್ತು ಎನ್.ಸಿ.ಇ.ಆರ್. ಟಿ.ಯು ಕಡ್ಡಾಯವಾಗಿ ತೆಗೆದುಹಾಕಬೇಕೆಂದು ಆದೇಶಿಸಿದ ವಿಷಯಗಳ ಮೇಲೆ ಪ್ರಾಥಮಿಕ ಗಮನವನ್ನು ಕೇಂದ್ರೀಕರಿಸಲಾಗಿದೆಯಾದರೂ ಲಿಂಗ-ಭೇದ ಮಾಡದೆ ಸಮಾನ ಶಿಕ್ಷಣವನ್ನು ಒದಗಿಸುವ ಸರ್ಕಾರಗಳದ್ದೇ ಆದ ಬದ್ಧತೆ ಹೇಗೆ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನಿಂದಾಗಿ ಅಪಾಯಕ್ಕೆ ಸಿಲುಕಿದೆ ಎಂಬುದು ಪರಿಶೀಲನೆಗೆ ಒಳಪಟ್ಟಿಲ್ಲ. ಸರ್ವರಿಗೂ ಸಮಾನತೆ, ಮೂಲಭೂತ ಹಕ್ಕುಗಳು ಮತ್ತು ಗುಣಮಟ್ಟದ ಶಿಕ್ಷಣ ದೊರೆಯಬೇಕು ಎಂಬ ಒತ್ತಾಸೆಯನ್ನು ಎನ್‌ಸಿಎಫ್‌ನಲ್ಲಿ ಪುನರುಚ್ಚರಿಸಲಾಗಿದೆಯಾದರೂ, ಅದನ್ನು ಗಮನವಿಟ್ಟು ಓದಿದಾಗ, ಎನ್‌ಸಿಎಫ್‌ನಿಂದ ಮಹಿಳೆಯರು ಉತ್ತಮ ತಾಯಂದಿರಾಗಿ, ಹೆಂಡತಿಯರಾಗಿ ಮತ್ತು ಮಗಳಾಗಿ ತಮ್ಮ ಕುಟುಂಬದೊಳಗೆ ಮತ್ತು

ರಾಷ್ಟ್ರದೊಳಗೆ ತಮ್ಮ "ಸಾಂಪ್ರದಾಯಿಕ" ಸಾಮಾಜಿಕ ಪಾತ್ರಗಳನ್ನು ನಿರ್ವಹಿಸುವುದನ್ನು ಕಲಿಹತ್ತಿದ್ದಾರೆ ಎಂಬುದು ಖಾತರಿಯಾಗುತ್ತದೆ.

ಈ ಲೇಖನವನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಮೊದಲನೆಯ ಭಾಗದಲ್ಲಿ ಎನ್ ಸಿ ಎಫ್ ನ ಪ್ರಮುಖ ಆಶಯವು ಭವಿಷ್ಯದಲ್ಲಿ ಶಿಕ್ಷಣದ ಸಂಭವನೀಯ ವಿಷಯದ ಮೇಲೆ ಹೇಗೆ ಪ್ರಭಾವ ಬೀರಬಹುದು ಎಂಬುದನ್ನು ಪರಿಶೀಲಿಸುತ್ತದೆ. ಭಾರತೀಯ ಪರಂಪರೆ, ಮೌಲ್ಯ ಶಿಕ್ಷಣ ಮತ್ತು ಧಾರ್ಮಿಕ ಶಿಕ್ಷಣದ ಕುಸಿತದ ಮೇಲೆ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (ಎನ್ ಸಿ ಎಫ್) ಒತ್ತು ನೀಡುವ ಉಪಕ್ರಮದಿಂದಾಗಿ ಶಿಕ್ಷಣವು ಮಹಿಳಾ ಸಬಲೀಕರಣವನ್ನು ಶಕ್ತಗೊಳಿಸುವ ಸಾಧನವಾಗಿ ಹೊರಹೊಮ್ಮುವ ಸಾಧ್ಯತೆಗೆ ಅಡಚಣೆ ಉಂಟು ಮಾಡುತ್ತದೆ ಎಂದು ಅದು ವಾದಿಸುತ್ತದೆ. 19ನೇ ಶತಮಾನದ ವಸಾಹತುಶಾಹಿ ಭಾರತದಲ್ಲಿ ನಡೆಯುತ್ತಿದ್ದ ಮಹಿಳಾ ಶಿಕ್ಷಣದ ಕುರಿತಾದ ಚರ್ಚೆಗಳನ್ನು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಚರ್ಚೆಗಳೊಂದಿಗೆ ಹೋಲಿಸಿದಾಗ ಎನ್‌ಸಿಎಫ್‌ನ ಈ ಈ ಹೊಸ ಸಂಕಥನವು ಹಳೆಯ ಆತಂಕಗಳು ಹಾಗೂ ಹಳೆಯ ಪರಿಹಾರಗಳ ಮರು ಹೇಳಿಕೆಯಂತೆ ಕಂಡು ಬರುತ್ತದೆ. ಈ ಚರ್ಚೆಗಳಿಗೆ ಹೊಂದಿಕೊಂಡಂತೆ, ಕೊಂಚ ಸಂಕ್ಷಿಪ್ತವಾದರೂ ಸಹ, ಎರಡನೆಯ ವಿಭಾಗವು ಮಹಿಳಾ ಶಿಕ್ಷಣಕ್ಕೆ ಸಂಬಂಧಿಸಿದಂತಹ 1986ರ ಹೊಸ ಶಿಕ್ಷಣ ನೀತಿಯ ಮುನ್ನೋಟ ಮತ್ತು ನೀತಿಯ ಚೌಕಟ್ಟನ್ನು ಮರುಪರಿಶೀಲಿಸುತ್ತದೆ. ಇನ್ನೂ ನಿರ್ದಿಷ್ಟವಾಗಿ ಹೇಳುವುದಾದರೆ, ಇದು ಶಾಲಾ ಪಠ್ಯಪುಸ್ತಕಗಳನ್ನು ಬರೆಯುವ, ವಿಶೇಷವಾಗಿ ಭಾಷಾ ಬೋಧನೆಗೆ ಸಂಬಂಧಿಸಿದ ಬರವಣಿಗೆಯ ನಿಜವಾದ ಕಾರಣದ ಮೇಲಿನ 'ಟ್ರಿಕಲ್-ಡೌನ್' (ಮೇಲ್ಮಟ್ಟದಲ್ಲಿ ಆರಂಭಗೊಂಡು, ನಂತರದಲ್ಲಿ ಇಡೀ ವ್ಯವಸ್ಥೆಗೆ ತಲುಪುವಂತಹ ಸಿದ್ಧಾಂತ) ಎಂಬ ಪ್ರಗತಿಪರ ನೀತಿಯ ಪರಿಣಾಮವನ್ನು ವಿಶ್ಲೇಷಿಸುತ್ತದೆ. ವಿಮರ್ಶೆಯು ಗುರುತಿಸುವಂತೆ, 1986ರ ನೀತಿ ಪರಿಷ್ಕರಣೆಗಳಾದ ನಂತರದ ದಶಕದಲ್ಲಿ, ಪಠ್ಯಗಳಲ್ಲಿ ಲಿಂಗತ್ವವನ್ನು ನಿರ್ವಹಿಸಿದ ರೀತಿಯು ಯಾವುದೇ ಗಮನಾರ್ಹವಾದ ಧನಾತ್ಮಕ ಪರಿಣಾಮವನ್ನು ಉಂಟುಮಾಡಲಿಲ್ಲ. ಈ ವಿಶ್ಲೇಷಣೆಯ ಗ್ರಹಿಕೆಯು ಸ್ಪಷ್ಟವಾಗಿದೆ: ಮಹಿಳೆಯರ ಮೇಲಿನ ಪ್ರತಿಗಾಮಿ ದೃಷ್ಟಿಕೋನಗಳಿಗಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು ಟೀಕಿಸಬೇಕು ನಿಜ. ಜೊತೆಗೆ, ಶಾಲಾ ಪಠ್ಯಕ್ರಮದಲ್ಲಿ ಆಳವಾಗಿ ಬೇರೂರಿರುವ ಲಿಂಗತ್ವ ಸಿದ್ಧಮಾದರಿಗಳನ್ನು ಕೇವಲ ಪ್ರಗತಿಪರ ನಿರ್ವಚನಗಳು ಬದಲಾಯಿಸಬಹುದು ಎಂದು ನಂಬಲು ಸಾಧ್ಯವಿಲ್ಲ. ನೀತಿಯ ಚೌಕಟ್ಟು ಮಹಿಳೆಯರಿಗೆ ಪರ್ಯಾಯ ಮಾದರಿಗಳ ವಾಸ್ತವೀಕರಣ ಮತ್ತು ಪ್ರಾತಿನಿಧ್ಯ ನೀಡುವ ಸಂಗತಿಗಳನ್ನು ನಿಭಾಯಿಸದ ಹೊರತು, ಯಾವುದೇ ರೀತಿಯ ನಿಜವಾದ ಪ್ರಗತಿಯನ್ನು ಸಾಧಿಸಲು ಆಗುವುದಿಲ್ಲ.

ಒಂದು

ಪರಂಪರೆ ಎಂಬ ಹೊರೆ

ಎಲ್ಲರಿಗೂ ತಿಳಿದಿರುವಂತೆ, 19ನೇ ಶತಮಾನದ ವಸಾಹತುಶಾಹಿ ಭಾರತದಲ್ಲಿ ಮಹಿಳಾ ಶಿಕ್ಷಣವು ಗಮನಾರ್ಹ ವಿಚಾರವಾಗಿ ಹೊರಹೊಮ್ಮಿದೆ. 19ನೇ ಶತಮಾನವು ಸಮಾಜ ಸುಧಾರಕರು ಮತ್ತು ಬ್ರಿಟಿಷ್ ಸರ್ಕಾರವು ಮಹಿಳೆಯರಿಗೆ ಮತ್ತು ಬಾಲಕಿಯರಿಗೆ ಶಿಕ್ಷಣ ಸಂಸ್ಥೆಗಳು ಸ್ಥಾಪಿತವಾದುದನ್ನು ಕಂಡಿದೆ.. 19ನೇ ಶತಮಾನದುದ್ದಕ್ಕೂ, ಅದರಲ್ಲೂ ನಿರ್ದಿಷ್ಟವಾಗಿ 19ನೇ ಶತಮಾನದ ಉತ್ತರಾರ್ಧದಲ್ಲಿ, ಉದಾತ್ತ- ಪ್ರಗತಿಶೀಲರೆಂದು ಕರೆಸಿಕೊಳ್ಳುವವರ ಮತ್ತು ಸಂಪ್ರದಾಯವಾದಿ- ಪುನರುಜ್ಜೀವನಕಾರರ ನಡುವೆ ಮಹಿಳಾ ಶಿಕ್ಷಣದ ಸ್ವರೂಪ ಮತ್ತು ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆಗಳು -ರಾಷ್ಟ್ರೀಯ ಪ್ರಜ್ಞೆಯ ವ್ಯಾಪಕ ಮಾನದಂಡಗಳ ಹಿನ್ನೆಲೆಯಲ್ಲಿ- ತೀವ್ರವಾದ ವಿಷಯವಾಯಿತು. ಎರಡೂ ಗುಂಪುಗಳ ನಡುವಿನ ವ್ಯತ್ಯಾಸಗಳನ್ನು ಮೀರಿದ ನೆಲೆಗಳಲ್ಲಿ ಕೆಲವು ಸಾಮಾನ್ಯ ಅಂಶಗಳಿದ್ದವು. ಮೊದಲನೆಯದಾಗಿ, ಸಮಕಾಲೀನ ಸಮಾಜದಲ್ಲಿ ಮಹಿಳೆಯರಿಗೆ ಶಿಕ್ಷಣವನ್ನು ನೀಡದಿರುವುದು -ಐತಿಹಾಸಿಕವಾಗಿ ಅಂತಹ ಪರಿಸ್ಥಿತಿಗೆ ಕಾರಣಗಳೇನೇ ಇರಬಹುದು- ಭಾರತದ ನಾಗರಿಕತೆಯ ಕೊರತೆಯ ಸಂಕೇತವಾಗಿದೆ ಮತ್ತು ಇದು ಇತಿಹಾಸದ ವಿಕಾಸದ ಸುರುಳಿಯಲ್ಲಿ ಅದರ ಕೆಳ ಸ್ಥಾನವನ್ನು ಸೂಚಿಸುತ್ತದೆ ಎಂದು ಎರಡೂ ಕಡೆಯವರು ಒಪ್ಪಿಕೊಂಡರು. ಅದರ ಅನುಸಂಧಾನವು ಅಷ್ಟೇ ಸರಳವಾಗಿತ್ತು: ಭಾರತವು ತನ್ನ ಭೌತಿಕ ಸಾಧನೆಗಳ ವಿಷಯದಲ್ಲಿ ಪಶ್ಚಿಮಕ್ಕೆ ಸಮನಾಗಿ ನಿಲ್ಲಬೇಕಾದರೆ, ದೇಶದ ಮಹಿಳೆಯರು ಶಿಕ್ಷಣ ಹೊಂದುವುದು ತುರ್ತಾದ ಅನಿವಾರ್ಯತೆ ಆಗಿತ್ತು. ಜೊತೆಗೆ, ಈ ಶಿಕ್ಷಣದ ಜವಾಬ್ದಾರಿಯನ್ನು ಅನ್ಯ ವಸಾಹತುಶಾಹಿ ರಾಜ್ಯ ಅಥವಾ ಮಿಷನರಿಗಳಿಗೆ ಬಿಡಲಾಗದು. ಏಕೆಂದರೆ, ಶಿಕ್ಷಣ ಪಡೆಯುವ ಪ್ರಕ್ರಿಯೆಯಲ್ಲಿ, ಇಲ್ಲಿಯ ಮಹಿಳೆಯು ತನ್ನನ್ನು ಬಿಳಿಯ, ಪಾಶ್ಚಿಮಾತ್ಯ ಮಹಿಳೆಯ ಪ್ರತಿರೂಪದ ಮಾದರಿಯಲ್ಲಿ ಮರು ರೂಪಿಸಿಕೊಳ್ಳುವುದಕ್ಕಿಂತ ಹೆಚ್ಚಿನದನ್ನು ಸಾಧಿಸದಿದ್ದರೆ, ಅದು ಸ್ಥಳೀಯ ಸಮಾಜದ ವಿಷಯದಲ್ಲಿ ಅಥವಾ ಅಭಿವೃದ್ಧಿ ಹೊಂದುವ ಆರಂಭಿಕ ಹಂತದಲ್ಲಿನ ಭಾರತೀಯ ರಾಷ್ಟ್ರದ ಅಸ್ಮಿತೆಯ ವಿಷಯದಲ್ಲಿ ಹೊಸ ಬಿಕ್ಕಟ್ಟನ್ನು ಸೃಷ್ಟಿಸಬಹುದು. ಸೂತ್ರರೂಪದಲ್ಲಿ ಹೇಳುವುದಾದರೆ, ಚರ್ಚೆಯನ್ನು ಸುಲಭವಾಗಿ ಈ ರೀತಿ ಸಂಕ್ಷಿಪ್ತಗೊಳಿಸಬಹುದು: ಮಹಿಳಾ ಶಿಕ್ಷಣವನ್ನು ಸ್ವಾಗತಿಸತಕ್ಕದ್ದು ಅಹುದೆನ್ನಬಹುದು ಮತ್ತು ಅನಿಯಂತ್ರಿತ ಪಾಶ್ಚಿಮಾತ್ಯ ಶಿಕ್ಷಣವನ್ನು ಅಷ್ಟೇ ವಿಧೇಯತೆಯಿಂದ ನಿರಾಕರಿಸತಕ್ಕದ್ದು.

ಶಿಕ್ಷಣದ ಹೆಸರಿನಲ್ಲಿ ಕಲಿಸಲಾಗುತ್ತಿರುವ ವಿಷಯಗಳ ಬಗೆಗಿನ ಆತಂಕವು ಕೇವಲ ಸ್ಥಳೀಯ ಅಸ್ಮಿತೆಗೆ ಒದಗುವ ಕುತ್ತಿನ ಪ್ರಶ್ನೆಯೊಂದೇ ಆಗಿರಲಿಲ್ಲ. ಅಸ್ತಿತ್ವದಲ್ಲಿರುವ ಸಾಮಾಜಿಕ ಕ್ರಮದ ಮೇಲಿನ ಜ್ಞಾನೋದಯದ ವಿಚಾರವಾದಿ-ಮಾನವತಾವಾದದ ಸಂದೇಶವನ್ನು ಆಧರಿಸಿದ ಆಧುನಿಕತಾವಾದಿ ಆಕ್ರಮಣದ ಭಯ ಸಹ ಕೂಡಿತ್ತು. ಈ ಭಯವು ಜಾತಿ, ಜನಾಂಗೀಯತೆ ಅಥವಾ ಲಿಂಗಕ್ಕೆ ಸಂಬಂಧಿಸಿದ ಅಧಿಕಾರ ಶ್ರೇಣಿಗಳನ್ನು ತಲೆಕೆಳಗೆ ಮಾಡಿ ಸಾಮಾಜಿಕ ದಿಗ್ಭ್ರಮೆಯ ಸ್ಥಿತಿಗೆ ಕಾರಣವಾಗುತ್ತದೆ ಎಂಬುದಾಗಿತ್ತು. ಭಾರತೀಯ ಮಹಿಳೆಯರಿಗೆ ಯಾವ

ರೀತಿಯ ಶಿಕ್ಷಣವು ಸೂಕ್ತವಾಗಿರುತ್ತದೆ ಎಂಬುದನ್ನು ವ್ಯಾಖ್ಯಾನಿಸುವಲ್ಲಿ ಮುನ್ನೆಚ್ಚರಿಕೆಯೂ ಹೆಚ್ಚುತ್ತಿದ್ದುದು ಆಶ್ಚರ್ಯವೇನಾಗಿರಲಿಲ್ಲ.

1887ರಲ್ಲಿ ಬಾಂಬೆಯ ಹೆಣ್ಣು ಮಕ್ಕಳ ಪ್ರೌಢಶಾಲೆಯ ಕುರಿತ ತನ್ನ ವಿಶ್ಲೇಷಣೆಯಲ್ಲಿ **ಮರಾಠಾ** (ಮಾನ್ಯ ಬಾಲಗಂಗಾಧರ್ ತಿಲಕ್ ತರುತ್ತಿದ್ದ ಮರಾಠಿ ಪತ್ರಿಕೆ) ಹೀಗೆ ಗುಡುಗಿತ್ತು: "ನಮ್ಮ ಹುಡುಗಿಯರನ್ನು ಆಂಗ್ಲೀಕರಣಗೊಳಿಸುವುದರಿಂದ ಅಥವಾ ಪುರುಷರ ರೀತಿ-ನೀತಿಗಳನ್ನು ಅನುಕರಿಸುವಂತೆ ಬೆಳೆಸುವುದರಿಂದ ಏನನ್ನೂ ಸಾಧಿಸಲಾಗುವುದಿಲ್ಲ." ಶಾಲೆಗಳು "ನಮ್ಮ ದೇಶೀಯ ಜೀವನದಿಂದ ವಿಮುಖವಾಗುವ ಪರಿಸ್ಥಿತಿಯನ್ನು" ಸೃಷ್ಟಿಸಬಾರದು. "ಪ್ರಾಚೀನ ಆರ್ಯನ್ ಧಾರ್ಮಿಕ ನೈತಿಕತೆಯ ಉನ್ನತ ತತ್ವಗಳನ್ನು" ಒಳಗೊಳ್ಳುವ ಪಾಠಗಳು ಬಾಲಕಿಯರ ಪಠ್ಯಕ್ರಮದಲ್ಲಿ ಎದ್ದುಕಾಣುವ ರೀತಿಯಲ್ಲಿ ಇಲ್ಲದಿರುವುದು ಮತ್ತು ಅದು "ಪತಿವ್ರತಾ ನಡವಳಿಕೆಗೆ ಸಂಬಂಧಿಸಿದಂತೆ ಯುವತಿಯರಿಗೆ ನೀಡಿದ ಸಲಹೆ ಇಲ್ಲದಿರುವುದು 'ಅತ್ಯಂತ ಖಂಡನೀಯ'"[i]

ಮೇಲ್ನೋಟಕ್ಕೆ 'ಪ್ರತಿಕ್ರಿಯಾತ್ಮಕ'ಧ್ವನಿಯಾಗಿ ಕಾಣುವ ಮರಾಠಾದ ಈ ಅಭಿಪ್ರಾಯ ಅತಿಶಯವಾದುದೇನಲ್ಲ. 19ನೇ ಶತಮಾನದ ಉತ್ತರಾರ್ಧದಲ್ಲಿ ಭಾರತೀಯ ರಾಷ್ಟ್ರೀಯತೆಯ ಅತ್ಯಂತ ಪ್ರಸಿದ್ಧವಾದ "ಪ್ರಗತಿಪರ"ರೆಂದು ಗುರುತಿಸಿಕೊಂಡಿದ್ದ ದಾದಾಭಾಯಿ ನವರೋಜಿ, ಇಂತಹದ್ದೇ ಆತಂಕಗಳನ್ನು ಬಹಳ ಸುಧಾರಿತ ರೀತಿಯಲ್ಲಿ ವ್ಯಕ್ತಪಡಿಸಿದ್ದರು: "ಸ್ತ್ರೀ ಶಿಕ್ಷಣದಿಂದ ದೊರೆಯುವ ಪ್ರಯೋಜನವು ಸಾಮಾನ್ಯವಾಗಿ ನಾಗರಿಕತೆಯನ್ನು ಬೆಳೆಸುವಲ್ಲಿ ಮತ್ತು ಸಾಮಾಜಿಕ ಸಂತೋಷ ಮತ್ತು ಪ್ರಗತಿಯನ್ನು ಮುನ್ನಡೆಸುವಲ್ಲಿ ಉನ್ನತ ಸಾಮಾಜಿಕ ಅಗತ್ಯವಾಗಿದೆ ಎಂದು ಸ್ತ್ರೀಯರು ಅರ್ಥಮಾಡಿಕೊಳ್ಳುವ ಸಮಯ ಬರುತ್ತದೆ; ಮತ್ತು ಪ್ರತಿಯೊಬ್ಬರೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಸಾಮಾನ್ಯ ಒಳಿತಿಗಾಗಿ ಕೆಲಸ ಮಾಡುತ್ತಾ, ಈ ಪ್ರಪಂಚದ ಎಲ್ಲಾ ಹಕ್ಕುಗಳು, ಸವಲತ್ತುಗಳು ಮತ್ತು ಕರ್ತವ್ಯಗಳನ್ನು ಚಲಾಯಿಸಲು ಮತ್ತು ಆನಂದಿಸಲು ಮಹಿಳೆಯರೂ ಕೂಡ ಪುರುಷರಷ್ಟೇ ಹಕ್ಕನ್ನು ಹೊಂದಿರುತ್ತಾರೆ ಎಂದು ಅರ್ಥಮಾಡಿಕೊಳ್ಳುತ್ತಾರೆ. *ಆದರೆ ಆ ಸಮಯ ಇನ್ನೂ ಕೂಡಿ ಬಂದಿಲ್ಲ... ಒಳ್ಳೆಯ ಮತ್ತು ವಿದ್ಯಾವಂತ ತಾಯಂದಿರು ಮಾತ್ರ ಉತ್ತಮ ಮತ್ತು ವಿದ್ಯಾವಂತ ಮಕ್ಕಳನ್ನು ಬೆಳೆಸುತ್ತಾರೆ."*

1916ರಲ್ಲಿ, ಕೊಕನಾಡಾದ ಜಮೀನ್ದಾರರಾದ ಕೆ ಬಿ ವಿ ಕೃಷ್ಣರಾವ್ ಅವರು ಹೀಗೆ ಬರೆದಿದ್ದಾರೆ: "ಹೆಣ್ಣುಮ್ಮಕ್ಕಳ ಶಿಕ್ಷಣವು ಬೇರೆ ಬೇರೆ ವರ್ಗಗಳ ಹೆಣ್ಣುಮ್ಮಕ್ಕಳ ಬೇರೆ ಬೇರೆ ಪರಿಸ್ಥಿತಿಗಳಿಗೆ ಸರಿಹೊಂದುವಂತೆ ವಿವಿಧ ದಿಕ್ಕುಗಳಲ್ಲಿ ಸುಧಾರಿಸಬೇಕಾಗಿದೆ. ಅವರು ಉತ್ತಮ ಗೃಹಿಣಿಯರು ಮತ್ತು ಉತ್ತಮ ತಾಯಂದಿರಾಗಲು ಅನುವಾಗುವಂತೆ ಅವರನ್ನು ಸುಸಜ್ಜಿತಗೊಳಿಸಬೇಕಾಗಿದೆ... ಅವರ ಭವಿಷ್ಯದ ಜೀವನದಲ್ಲಿ ಅವರು ಸಂತೋಷದಿಂದಿರುವ

ಅವಕಾಶವನ್ನು ಹೊಂದಿರದ ಅಭಿರುಚಿಗಳನ್ನು ಅವರಲ್ಲಿ ಅಳವಡಿಸುವಂತಹ ಶಿಕ್ಷಣವನ್ನು ನೀಡುವುದು ಬುದ್ಧಿವಂತಿಕೆಯಲ್ಲ (sic)".

ಇದರ ಉದ್ದೇಶ ಸುಸ್ಪಷ್ಟ: ಮಹಿಳಾ ಶಿಕ್ಷಣವೇ ಗುರಿಯಲ್ಲ, ಬೇರೆ ಮತ್ತೊಂದು ಗುರಿಗೆ ಅದೊಂದು ದಾರಿಯಾಗಿದೆ; ಆ ಗುರಿ ಕುಟುಂಬ ಮತ್ತು ರಾಷ್ಟ್ರದ ಸುಧಾರಣೆಯಾಗಿದೆ. ಪುರುಷರಿಗೆ ಲಭ್ಯವಿರುವ ಎಲ್ಲಾ ಹಕ್ಕುಗಳನ್ನು ಅನುಭವಿಸುವ ಹಕ್ಕು ಮಹಿಳೆಯರಿಗೂ ಇದೆ ಎಂದು ನವರೋಜಿ ಉಲ್ಲೇಖಿಸಿದ್ದರೂ, ಮಹಿಳೆಯರು ದೇಶಕ್ಕೆ ಪುತ್ರರನ್ನು ನೀಡುತ್ತಾರೆ ಎಂಬ ಪರಿಚಿತ ಅಂಶವನ್ನು ತಪ್ಪಾಗಿ ಗ್ರಹಿಸಲಾಗುವುದಿಲ್ಲ. ಅಥವಾ "ಆಂಗ್ಲೀಕೃತ" ಭಾರತೀಯ ಮಹಿಳೆಯರು ತಮ್ಮ ಸ್ವಂತ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ತ್ಯಜಿಸಿ, ಭಾರತೀಯ ಪುರುಷರು ಈಡೇರಿಸಲು ಸಾಧ್ಯವಾಗದ 'ಅಭಿರುಚಿ'ಯನ್ನು ಬೆಳೆಸಿಕೊಳ್ಳುವತ್ತ ಸಾಗುತ್ತಾರೆ ಎಂಬ ಭಯವನ್ನು ನಿರ್ಲಕ್ಷಿಸಲಾಗುವುದಿಲ್ಲ.

ಈ ಸೃಷ್ಟಿಗೆ ಅಂತರ್ಗತವಾಗಿ ಬೌದ್ಧಿಕ ಶ್ರಮವಿತ್ತು. ಅದು ಪಾಶ್ಚಿಮಾತ್ಯ ಮಹಿಳೆಯರಿಂದ ಪೌರ್ವಾತ್ಯ (ಒರಿಯಂಟ್) ಮಹಿಳೆಯರನ್ನು ಪ್ರತ್ಯೇಕಿಸುವ ಈ ಬೌದ್ಧಿಕ ವ್ಯವಸಾಯದಲ್ಲಿ ಹೊಸ ರಾಷ್ಟ್ರೀಯತಾವಾದಿ ಪಿತೃಪ್ರಧಾನ ಪ್ರಭುತ್ವದ ನಿಲುವು ಅಂತರ್ನಿಹಿತವಾಗಿದೆ. ಈ ಸುಮಾರು ಅರ್ಧ ಶತಮಾನದ ಹಿಂದೆ ರಾಮ್ ಮೋಹನ್ ರಾಯ್ ಅವರು ಹೇಳಿದಂತೆ: ಹಿಂದೂ ಮಹಿಳೆಯರು "ಪರುಷರಿಗಿಂತ ಅಪರಿಮಿತವಾಗಿ ಸ್ವಯಂ ತ್ಯಾಗಿಗಳಾಗಿದ್ದರು" ಮತ್ತು ಅವರ "ಆದರ್ಶಪ್ರಾಯವಾದ ಪತಿವ್ರತಾ ಮನೋಭಾವ ಮತ್ತು ಆಧ್ಯಾತ್ಮಿಕ ಶಕ್ತಿಯೇ" ಪೌರ್ವಾತ್ಯದ ಮಹಿಳೆಯರಾಗಿ ಅವರ ವಿಶಿಷ್ಟವಾದ ಲಕ್ಷಣವಾಗಿದೆ.

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 19ನೇ ಶತಮಾನವನ್ನು ವಿವೇಚಿಸುತ್ತದೆ. ಅದರ ಪ್ರಮುಖ ಕಾಳಜಿಯೂ ಸಹ ಸ್ವಯಂ-ಸ್ಪಷ್ಟವಾದ ಮತ್ತು ಸಮಸ್ಯಾತ್ಮಕವಲ್ಲದ ಭಾರತೀಯ ಸಂಪ್ರದಾಯದೊಳಗೇ ಪಠ್ಯಕ್ರಮವನ್ನು ಕಂಡುಕೊಳ್ಳುವುದಾಗಿದೆ. ಆರಂಭಿಕ ಚರ್ಚೆಗೆ ಮುಜುಗರ ಹುಟ್ಟಿಸುವಷ್ಟು ನಿಷ್ಠಾವಂತಿಕೆ ತೋರಿಸುತ್ತ, ತಾಂತ್ರಿಕ ಆಧುನಿಕತೆಯ ಮುಖಾಂತರ ಆಗಬಹುದಾದ ಆಂಗ್ಲೀಕರಣವನ್ನು ತಡೆದು ಭಾರತೀಯ ಹೆಣ್ತನದ ಅತ್ಯುತ್ತಮ ಗುಣಗಳನ್ನು ಕಾಪಾಡಿಕೊಳ್ಳಲು ಪಠ್ಯಕ್ರಮವನ್ನು "ಭಾರತೀಕರಣ" ಮಾಡಿರುವುದು ಎನ್‌ಸಿಎಫ್ ತುಂಬೆಲ್ಲ ಕಂಡುಬರುತ್ತದೆ.

ಸಮಕಾಲೀನ ಭಾರತೀಯ ಸಮಾಜವು ತನ್ನ 'ಧಾರ್ಮಿಕ- ತಾತ್ವಿಕ ತತ್ತ್ವ'ದಿಂದ ದೂರವಾಗುತ್ತಿರುವ ಬಗ್ಗೆ ಆಳವಾದ ಆತಂಕ ವ್ಯಕ್ತವಾಗಿರುವುದು ನಿರೀಕ್ಷಿತವೇ ಆಗಿದೆ:

"ಆದಾಗ್ಯೂ ಸಮಕಾಲೀನ ಭಾರತೀಯ ಸಮಾಜದ ಒಂದು ಗಣನೀಯ ಭಾಗವು ಧಾರ್ಮಿಕ ಮತ್ತು ತಾತ್ವಿಕ ನೀತಿ, ಸಾಮಾಜಿಕ ವಿನ್ಯಾಸದ ಅರಿವು ಮತ್ತು ಹಿಂದಿನ ಪರಂಪರೆಯ

ತಿಳುವಳಿಕೆಯಿಂದ ತನ್ನನ್ನು ತಾನು ದೂರವಿರಿಸಿಕೊಂಡಂತೆ ತೋರುತ್ತದೆ. ಪರಕೀಯ ತಾಂತ್ರಿಕ ನೀತಿಯಿಂದ ಪ್ರಭಾವಿತರಾಗಿ, ಪೋಷಕರು ಮತ್ತು ಶಿಕ್ಷಣ ಸಂಸ್ಥೆಗಳು ಉನ್ನತ ದರ್ಜೆಯ ತಾಂತ್ರಿಕ ತಿಳುವಳಿಕೆಯ ಜ್ಞಾನಾರ್ಜನೆಗೆ ಮಾತ್ರ ಒತ್ತು ನೀಡುತ್ತವೆ. ಆದಾಗ್ಯೂ, ಪಾಶ್ಚಿಮಾತ್ಯೀಕರಣದ ಪ್ರಭಾವವು ಸಮಾಜದ ಗಣ್ಯ ಸದಸ್ಯರಿಗೆ ಮಾತ್ರ ಸೀಮಿತವಾಗಿದ್ದು ಜನಸಾಮಾನ್ಯರಿಗೆ ಈ ಬೆಳವಣಿಗೆಗಳ ಬಗ್ಗೆ ತಿಳಿದೇ ಇಲ್ಲದಂತಾಗಿದೆ. ಇದರ ಪರಿಣಾಮವಾಗಿ ಗ್ರಾಮೀಣ-ನಗರ, ಕೃಷಿ-ಕೈಗಾರಿಕೆ, ಶ್ರೀಮಂತ-ದೀನ, ಸಾಕ್ಷರ ಮತ್ತು ಅನಕ್ಷರಸ್ಥ ಎಂಬ ವಿಭಜನೆ ತೀವ್ರವಾಗಿ ಗೋಚರಿಸುವಂತಾಗಿದೆ. ಈ ರೀತಿಯಾಗಿ ಭಾರತೀಯ ಕೃಷಿಕ ಸಮಾಜದ ಅಧಿಕೃತ ರಚನೆಗೆ ಧಕ್ಕೆಯಾಗಿದೆ. ಔಪಚಾರಿಕ ಕೆಲಸದ ವ್ಯವಸ್ಥೆಯಲ್ಲಿನ ಒಬ್ಬ ವ್ಯಕ್ತಿಯು ವಯಸ್ಸಿನಲ್ಲಿ ಮತ್ತು ಸಾಮಾಜಿಕ ರಚನೆಯಲ್ಲಿ ತನಗಿಂತ ಮೇಲಿರುವವರ ಮೇಲೆ ಅಧಿಕಾರ ಚಲಾಯಿಸಬಹುದು. ಕೃಷಿ ಸಮಾಜದಲ್ಲಿ, ಪ್ರತಿಯೊಂದು ತಲೆಮಾರು ಅದರ ಹಿಂದಿನ ತಲೆಮಾರುಗಳು ಬಿಟ್ಟು ಹೋದ ಉದ್ಯೋಗವನ್ನೂ, ಕುಟುಂಬ ಅಥವಾ ಜಾತಿಗಳು ನಿಗದಿಪಡಿಸುವ ಗುರಿಗಳನ್ನೂ ದೊಡ್ಡ ಪ್ರಮಾಣದಲ್ಲಿ ಅನುಸರಿಸಿದರು." (*ಕನ್ಸೆಕ್ಸ್ಟ್ ಅಂಡ್ ಕನ್ಸರ್ನ್ಸ್*, ಪು 3).

ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಸಂಪ್ರದಾಯದ ನೆವದಲ್ಲಿ ಶಿಕ್ಷಣವನ್ನು ಅಸ್ಥಿರಗೊಳಿಸಲಾಯಿತು. ಸಾಂಪ್ರದಾಯಿಕ ಜಾತಿ ಸಮಾಜದೊಳಗೆ ಅಧಿಕಾರ ಸಂಬಂಧಗಳನ್ನು ನಿರ್ವಹಿಸಿ ಕಾಪಾಡಿಕೊಳ್ಳಲು ಎನ್‌ಸಿಎಫ್ ಸಾಂಪ್ರದಾಯಿಕವಾಗಿ ಶಿಕ್ಷಣವನ್ನು ಮರುಸ್ಥಾಪನೆ ಮಾಡಲು ಅಪೇಕ್ಷಿಸಿತು. ಇದು ಪಾಶ್ಚಿಮಾತ್ಯ ನಾಗರಿಕತೆಯೊಂದಿಗಿನ ಸಂಪರ್ಕವನ್ನು ಅನಪೇಕ್ಷಿತ ಸಾಮಾಜಿಕ ಸಂಘರ್ಷ ಮತ್ತು ಪ್ರಕ್ಷುಬ್ಧತೆಯ ಮೂಲ ಎಂಬಂತೆ ನೋಡುವುದಲ್ಲದೇ ಪಾಶ್ಚಿಮಾತ್ಯೀಕರಣವನ್ನು ಪ್ರತ್ಯೇಕಿಸುತ್ತದೆ. ಅದನ್ನು ಸ್ಥಾಪಿತ ಅಧಿಕಾರಕ್ಕೆ ಒಡ್ಡಲಾದ ಸವಾಲು ಮತ್ತು ಕುಟುಂಬದ ಮಟ್ಟದಲ್ಲಾಗಲಿ ಅಥವಾ ಸಮುದಾಯದ ಮಟ್ಟದಲ್ಲಾಗಲಿ ಒಂದು ಗಂಭೀರವಾದ ಅಪಾಯ ಎಂದು ಸರಳವಾಗಿ ವ್ಯಾಖ್ಯಾನಿಸುತ್ತದೆ. ಇದು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನೊಳಗೆ ವ್ಯಾಪಿಸಿರುವ ಆತಂಕದ ಮೂಲವಾಗಿದೆ. ಅಂದರೆ ಮರಾಠಾ ಪತ್ರಿಕೆಯ ಆಕಾಂಕ್ಷೆಯಂತೆ ಪ್ರಾಚೀನ ಆರ್ಯನ್ ಧಾರ್ಮಿಕ (ರಿಲಿಜಸ್) ನೈತಿಕತೆಯ ಉನ್ನತ ತತ್ವಗಳನ್ನು ತ್ಯಜಿಸದೆ "ಅನ್ಯ ತಾಂತ್ರಿಕ ನೀತಿಯ" ಫಲವನ್ನು ಅಳವಡಿಸಿಕೊಳ್ಳುವುದು ಹೇಗೆ ಎಂಬ ಆತಂಕದ ಮೂಲವಾಗಿದೆ.

ಈ ಆತಂಕದ ನಡುವೆ, ಶಿಕ್ಷಣವನ್ನು ಬದಲಾವಣೆ ಅಥವಾ ವಿಮೋಚನೆಯ ಶಕ್ತಿಯಾಗಿಯೂ ವ್ಯಾಖ್ಯಾನಿಸಬಹುದು ಎಂಬ ಅಂಶ ವಿಸ್ಮೃತಿಗೆ ಸರಿದಿದೆ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಎಲ್ಲಿಯೂ ಶಿಕ್ಷಣವನ್ನು ಸಬಲೀಕರಣದ ಸಾಧನವನ್ನಾಗಿ ಅಥವಾ ಸಾಮಾಜಿಕ ಚಲನಶೀಲತೆ ಅಥವಾ ಸಮಾನತೆಯ ಸಮಾಜವನ್ನು ಸಾಧಿಸುವ ಸಾಧನವನ್ನಾಗಿ ಪರಿಭಾವಿಸುವುದಿಲ್ಲ.

ಕುತೂಹಲಕರ ವಿಷಯವೆಂದರೆ, ಎನ್‌ಸಿಎಫ್‌ನಲ್ಲಿ 'ಹೆಣ್ಣು ಮಕ್ಕಳ ಶಿಕ್ಷಣ' ಎಂಬ ವಿಭಾಗವು ಸಾಮಾಜಿಕ ಒಗ್ಗಟ್ಟಿಗಾಗಿ ಶಿಕ್ಷಣ (ಬದಲಾವಣೆ ಅಥವಾ ಪ್ರಗತಿ ಎಂಬುದಕ್ಕೆ ಬದಲಾಗಿ) ಎಂಬ ವಿಸ್ತೃತ ಶೀರ್ಷಿಕೆಯಡಿ ಬರುತ್ತದೆ. ಇಲ್ಲಿ ಪ್ರಸ್ತುತ ಗೊಂಡಿರುವ ಸಂದಿಗ್ಧತೆಯು ಮಹಿಳಾ ಶಿಕ್ಷಣದ ಕುರಿತು ನವರೋಜಿಯವರು ಒತ್ತಿಹೇಳುವ ಹೇಳಿಕೆಗೆ ಗಮನಾರ್ಹವಾಗಿ ಹೋಲುತ್ತದೆ. ಇದರ ಸ್ವರೂಪವು ಸಹ ಹಾಗೆಯೇ ಇದೆ; ಇದು ಲಿಂಗ ಸಮಾನತೆಯ ಕುರಿತಾದ ಮಹತ್ವದ ಮತ್ತು ಅಮೂರ್ತವಾದ ಹೇಳಿಕೆಯೊಂದಿಗೆ ಪ್ರಾರಂಭಗೊಂಡು ನಂತರದಲ್ಲಿ ಲಿಂಗ ನಿರ್ದಿಷ್ಟ ಪಾತ್ರಗಳ ಬಗ್ಗೆ ಒತ್ತಿಹೇಳುವ ಮಟ್ಟಕ್ಕೆಸೀಮಿತಗೊಂಡಿದೆ.

ಲಿಂಗಗಳ ನಡುವಿನ ಸಮಾನತೆಯು ಭಾರತ ಸಂವಿಧಾನದ ಅಡಿಯಲ್ಲಿನ ಒಂದು ಮೂಲಭೂತ ಹಕ್ಕಾಗಿದೆ. ಹೆಚ್ಚು ಹೆಚ್ಚು ಹೆಣ್ಣುಮಕ್ಕಳಿಗೆ ಅದರಲ್ಲೂ ಗ್ರಾಮೀಣ ಭಾಗದ ಹೆಣ್ಣುಮಕ್ಕಳಿಗೆ ಶಿಕ್ಷಣಕ್ಕೆ ಪ್ರವೇಶ ದೊರೆಯುವಂತೆ ಮಾಡುವುದರ ಜೊತೆಗೆ, ಶಾಲಾ ಪಠ್ಯಕ್ರಮದಲ್ಲಿನ ಎಲ್ಲಾ ಲಿಂಗ-ತಾರತಮ್ಯ ಮತ್ತು ಲಿಂಗ-ಪಕ್ಷಪಾತವನ್ನು ತೆಗೆದುಹಾಕುವುದು ಅತ್ಯಗತ್ಯವಾಗಿದೆ. ಎಲ್ಲಕ್ಕಿಂತ ಮಿಗಿಲಾಗಿ ಭಾರತೀಯ ಪರಂಪರೆಯಲ್ಲಿ ಪ್ರತಿ ಲಿಂಗದ ಅತ್ಯುತ್ತಮ ಲಕ್ಷಣಗಳನ್ನು ಗುರುತಿಸಿ, ಪೋಷಿಸುವುದು ಅತ್ಯಂತ ಸೂಕ್ತವಾಗಿರುತ್ತದೆ.

"ಅಷ್ಟಕ್ಕೂ, ಮತದಾನದ ಹಕ್ಕಿಗೆ ಪಶ್ಚಿಮದ ಮಹಿಳೆಯರು ಹೋರಾಡಿದಂತೆ ಭಾರತವು ತನ್ನ ಮಹಿಳೆಯರಿಗೆ ಯಾವುದೇ ಸುದೀರ್ಘ ಸಂಘರ್ಷಕ್ಕೆ ಇಳಿಯಲು ಆಸ್ಪದ ನೀಡದೆ ಮತದಾನದ ಹಕ್ಕನ್ನು ನೀಡಿತು. ಸಮಾನ ಸಾಮರ್ಥ್ಯವುಳ್ಳ ಮತ್ತು ಪರಸ್ಪರ ಸಂವೇದನಾಶೀಲತೆಯನ್ನು ಹೊಂದಿರುವ ಹಾಗೂ ಪರಸ್ಪರ ಕಾಳಜಿಯುಳ್ಳ ಮತ್ತು ಹಂಚಿಕೊಳ್ಳುವ ಸ್ವಭಾವವನ್ನು ಬೆಳೆಸಿಕೊಂಡು ತಾವು ಎದುರಾಳಿಗಳಲ್ಲ, ಬದಲಾಗಿ ಸಮಾನರು ಎಂದು ಭಾವಿಸುವ ಸ್ತ್ರೀಪುರುಷರ ಪೀಳಿಗೆಯನ್ನು ಪೋಷಿಸಲು ಲಿಂಗ ಸಮನ್ವಯದ ಮತ್ತು ಲಿಂಗ ಸೂಕ್ಷ್ಮ ಪಠ್ಯಕ್ರಮದ ಕಾರ್ಯತಂತ್ರಗಳನ್ನು ಅಭಿವೃದ್ಧಿಪಡಿಸುವ ಮತ್ತು ಕಾರ್ಯಗತಗೊಳಿಸುವ ಅವಶ್ಯಕತೆ ಇದೆ". (*ಕನ್ಟೆಕ್ಸ್ಟ್ ಅಂಡ್ ಕನ್ಸರ್ನ್ಸ್*, ಪು ೨).

ಶಿಕ್ಷಣ ಮತ್ತು ಲಿಂಗ ಸಮಾನತೆಯ ಕಲ್ಪನೆಗಳು ಹುಟ್ಟುಹಾಕಬಹುದಾದ ಸಂಭಾವ್ಯ ಸಾಮಾಜಿಕ ಸಂಘರ್ಷದ ಬಗ್ಗೆ ತೀವ್ರವಾದ ಅರಿವನ್ನು ಮೂಡಿಸುವಲ್ಲಿ ನವರೋಜಿಯವರಿಗೆ ಹೋಲಿಸಿದರೆ ಇದು ಭಿನ್ನವಾಗಿದೆ. ಆದ್ದರಿಂದಲೇ, ಹೆಣ್ಣುಮಕ್ಕಳ ಶಿಕ್ಷಣದ ಪರಿಕಲ್ಪನೆಗೆ ಸಾಮಾಜಿಕ ಒಗ್ಗಟ್ಟಿನ ಅಡಿಯಲ್ಲಿ ಸ್ಥಾನಮಾನ ನೀಡಲಾಗಿದೆ. ಮತ್ತು ಆಂದೋಲನದ ರಾಜಕಾರಣದ ಪ್ರಸ್ತುತತೆಯನ್ನು ನಿರಾಕರಿಸಿ ಆದರ್ಶಪ್ರಾಯ ತಂತ್ರಗಾರಿಕೆಯ ಮಾರ್ಗಸೂಚಿಯಿಂದ ಮಹಿಳಾ ಸಮಾನತೆ ಸಾಧ್ಯವಾಗುತ್ತದೆ . ಪಶ್ಚಿಮದಲ್ಲಿ ಮಹಿಳೆಯರ ಹಕ್ಕುಗಳ ಬೇಡಿಕೆಯು ಕುಟುಂಬದಲ್ಲಿ ಒಡಕನ್ನು ಮೂಡಿಸಿದೆ. ಆದರೆ ಭಾರತದಲ್ಲಿ ಮಹಿಳೆಯರು ತಮ್ಮ ಹಕ್ಕುಗಳಿಗಾಗಿ ಪ್ರತಿಭಟಿಸಬೇಕಾಗಿಲ್ಲ. ಏಕೆಂದರೆ ಯಾವ ರೀತಿ ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡಲಾಗಿದೆಯೋ ಹಾಗೆಯೇ ಸದಾ ಉದಾರ ಮನೋಭಾವುಳ್ಳ ಭಾರತೀಯ ಪಿತೃಪ್ರಧಾನ ಪ್ರಭುತ್ವವು ಸರಿಯಾದ ಸಂದರ್ಭದಲ್ಲಿ

ಸಹಜವಾಗಿ ಅವರಿಗೆ ನ್ಯಾಯಸಮ್ಮತವಾಗಿ ಸಿಗಬೇಕಾದ ಹಕ್ಕನ್ನು ನೀಡುತ್ತದೆ ಎಂದು ಪ್ರತಿಪಾದಿಸುತ್ತದೆ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಸೆಕ್ಯುಲರ್ ಸಾಮಾಜಿಕ ಪ್ರವೃತ್ತಿಗಳನ್ನು ಮೂಲಭೂತ ಸಾಂಸ್ಕೃತಿಕ ವ್ಯತ್ಯಾಸದ ಗುರುತು ಎಂದು ತಪ್ಪಾಗಿ ಗ್ರಹಿಸಿ, ಪಾಶ್ಚಿಮಾತ್ಯ ನಾಗರಿಕತೆ ಮತ್ತು ಭಾರತೀಯ ಪರಂಪರೆಯ ನಡುವೆ ದ್ವಂದ್ವ ನಿಲುವಿನಲ್ಲಿ ಸಿಲುಕಿದೆ. ಇದಕ್ಕೆ ಸಾಕ್ಷಿ ಎಂಬಂತೆ, ಈ ಕೆಳಗಿನ ದುರದೃಷ್ಟಕರ ಉದಾಹರಣೆ: “ಅವಿಭಕ್ತ ಕುಟುಂಬ ಮತ್ತು ವಿಸ್ತೃತ ಕುಟುಂಬಕ್ಕೆ ವ್ಯತಿರಿಕ್ತವಾಗಿ, ಇಂದಿನ ಸಮಾಜವು ವಿಭಕ್ತ ಕುಟುಂಬಗಳು, ಒಂಟಿ ಪೋಷಕರು, ಅವಿವಾಹಿತ ಸಂಬಂಧಗಳು ಮುಂತಾದ ವಿದ್ಯಮಾನಗಳಿಗೆ ಸಾಕ್ಷಿಯಾಗಿದೆ...”.

ಇದರ ವ್ಯಂಗ್ಯವು ಎಷ್ಟು ಗಾಢವಾಗಿದೆಯೋ ಅಷ್ಟೇ ಕರುಣಾಜನಕವಾಗಿದೆ: ಭಾರತ ದೇಶವು ಕೌಟುಂಬಿಕ ಹಿಂಸಾಚಾರ ಮತ್ತು ಭ್ರೂಣಲಿಂಗ ಪತ್ತೆ ತಂತ್ರಜ್ಞಾನಗಳ ವಿರುದ್ಧ ಕಾನೂನು ಮಾಡುವ ಮೂಲಕ ತನ್ನ ಪ್ರಗತಿಪರ ಮೌಲ್ಯಗಳನ್ನು ಘೋಷಣೆ ಮಾಡುತ್ತಿದ್ದರೂ ಸಹ, ಎನ್‌ಸಿಎಫ್ ಕುಟುಂಬವೆಂಬ ಸಂಸ್ಥೆಯನ್ನು –ಭಾರತೀಯ ಮಹಿಳಾ ಚಳವಳಿಗಳು ಯಾವುದನ್ನು ಕಾನೂನುಬದ್ಧಗೊಳಿಸಲೆಂದು ಬಹುಕಾಲದಿಂದ ಹೋರಾಟ ಮಾಡುತ್ತ ಬಂದಿದೆಯೋ ಅದನ್ನು- ಪ್ರಶ್ನೆ ಮಾಡುವ ಅವಕಾಶದ ಬಾಗಿಲನ್ನು ಮುಚ್ಚುತ್ತದೆ.

ಮೌಲ್ಯ ಶಿಕ್ಷಣವಾಗಿ ಧಾರ್ಮಿಕ ಬೋಧನೆ

ಮೌಲ್ಯ ಶಿಕ್ಷಣ ಮತ್ತು ಧಾರ್ಮಿಕ ಬೋಧನೆಯ ನಡುವಿನ ವ್ಯತ್ಯಾಸವನ್ನು ಇಲ್ಲವಾಗಿಸುವ ನಿಟ್ಟಿನಲ್ಲಿ, ನಮ್ಮ ಸಮಾಜದಲ್ಲಿ ಮಹಿಳೆಯರು ಮತ್ತು ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವ ಉದ್ದೇಶಗಳ ಬಗ್ಗೆ ಎನ್‌ಸಿಎಫ್ ಹೊಸ ಪ್ರಶ್ನೆಗಳನ್ನು ಹುಟ್ಟು ಹಾಕುತ್ತದೆ.

ಮೌಲ್ಯ ಶಿಕ್ಷಣ ಮತ್ತು ಧರ್ಮಗಳ ಬಗೆಗಿನ ಶಿಕ್ಷಣವು ಯಾವುದೇ ಹಂತದಲ್ಲಿ ಪ್ರತ್ಯೇಕ ಅಧ್ಯಯನ ಅಥವಾ ಪರಿಶೀಲನೆಯ ವಿಷಯಗಳಾಗುವುದಿಲ್ಲ. ಇವುಗಳು ಶೈಕ್ಷಣಿಕ ಕ್ಷೇತ್ರಗಳಲ್ಲಿನ ಎಲ್ಲಾ ಅಧ್ಯಯನದ ವಿಷಯಗಳು ಮತ್ತು ಸಹ- ಶೈಕ್ಷಣಿಕ ಕ್ಷೇತ್ರಗಳಲ್ಲಿನ ಎಲ್ಲಾ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳೊಂದಿಗೆ ಎಷ್ಟು ವಿವೇಚನಾಶೀಲವಾಗಿ ಸಂಯೋಜಿಸಲ್ಪಟ್ಟಿರುತ್ತವೆ ಎಂದರೆ, ಇದರ ಉದ್ದೇಶಗಳನ್ನು ತರಗತಿಯಲ್ಲಿ, ಶಾಲೆಯ ಅಸೆಂಬ್ಲಿ ಸ್ಥಳಗಳಲ್ಲಿ, ಆಟದ ಮೈದಾನಗಳು ಮತ್ತು ಅಂತಹ ಇತರ ಸ್ಥಳಗಳಲ್ಲಿ ನೇರವಾಗಿ ಮತ್ತು ಪರೋಕ್ಷವಾಗಿ ಸಾಧಿಸಲಾಗುತ್ತದೆ (ಅಧ್ಯಾಯ 2, ಪುಟ 35).

ಪಾರಂಪರಿಕ ಮತ್ತು ಧಾರ್ಮಿಕತೆಯ ಅಸ್ಮಿತೆಯನ್ನು ಎತ್ತಿಹಿಡಿಯುವ ವಿಶೇಷ ಐತಿಹಾಸಿಕ ಹೊರೆಯನ್ನು ಮಹಿಳೆಯರು ಹೊತ್ತಿರುವ ಈ ಸಮಾಜದಲ್ಲಿ, ಅದೇ ಪೂರ್ವಗ್ರಹವನ್ನು ಎತ್ತಿಹಿಡಿಯುವ ಗುರಿಯನ್ನು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಹೊಂದಿದೆ. ವಿವಿಧ ಧರ್ಮ(ರಿಲಿಜನ್)ಗಳಲ್ಲಿ ಮಹಿಳೆಯರು ಹೊಂದಿರುವ ಅಧೀನ ಸ್ಥಾನವನ್ನು ಇದು ನಿರ್ಲಕ್ಷಿಸುತ್ತದೆ. ಇದು “ಶಿಕ್ಷಣವು ಹಿಂದಿನ ಸಂಚಿತ ವಿರೂಪಗಳನ್ನು ತಟಸ್ಥಗೊಳಿಸುತ್ತದೆ.” ಎಂಬ 1986ರ ರಾಷ್ಟ್ರೀಯ ಶಿಕ್ಷಣ ನೀತಿಗೆ ವ್ಯತಿರಿಕ್ತವಾದುದಾಗಿದೆ. ವಾಸ್ತವದಲ್ಲಿ, ರಾಷ್ಟ್ರೀಯ

ಪಠ್ಯಕ್ರಮ ಚೌಕಟ್ಟು ಹಿಂದಿನವರ ಶುಷ್ಕ ಭರವಸೆಗಳಿಗಿಂತಲೂ ಒಂದು ಹೆಜ್ಜೆ ಹಿಂದಕ್ಕೆ ಹೋಗುತ್ತದೆ. ಇದು ಧರ್ಮ(ರಿಲಿಜನ್)ದ ಅಸ್ಮಿತೆಗಳನ್ನು ಪುನರುಚ್ಚರಿಸುವ ಕಾರ್ಯಸೂಚಿಯನ್ನು ತರಗತಿ ಕೋಣೆಯ ಮಿತಿಯಿಂದ ಸಾಮಾಜಿಕ ಸಂವಹನ ಸಂಬಂಧಗಳವರೆಗೆ ವಿಸ್ತರಿಸುತ್ತದೆ.

ಇಲ್ಲಿ ಅತಿ ವಿಚಿತ್ರವೆನಿಸುವುದು ಏನೆಂದರೆ, ಇದು ಶೈಕ್ಷಣಿಕ ಸಾಧನೆಯ ಸೂಚಕವಾಗಿ ಆಧ್ಯಾತ್ಮಿಕ ಅಂಶ ಅಥವಾ ಎಸ್‌ಕ್ಯೂನ ಅಸ್ಪಷ್ಟವಾದ ಮತ್ತು ತಪ್ಪಾಗಿ ವ್ಯಾಖ್ಯಾನಿಸಲಾದ ಪರಿಕಲ್ಪನೆಯನ್ನು ಪರಿಚಯಿಸುತ್ತದೆ. ಈ ಹೊಸ-ವಿಚಿತ್ರ ಬೌದ್ಧಿಕ ಕುತರ್ಕಕ್ಕೆ ಪ್ರಾಯೋಗಿಕ ರೂಪವನ್ನು ಹೇಗೆ ನೀಡಬಹುದು ಎಂಬುದರ ಕುರಿತು ಎನ್‌ಸಿಎಫ್ ಕಿಂಚಿತ್ತೂ ಪರ್ಯಾಲೋಚಿಸದಿರುವುದು ಆಶ್ಚರ್ಯಕರವೇನಲ್ಲ. ಆಧ್ಯಾತ್ಮಿಕ ಅಂಶವನ್ನು -ಅದು ಒಂದು ನಿರ್ಣಾಯಕ, ವಸ್ತುನಿಷ್ಠ ವಿಷಯವನ್ನು ಹೊಂದಿದೆಯೆಂದು ಒಂದು ವೇಳೆ ಭಾವಿಸಿದರೂ ಸಹ- ಅದನ್ನು ಹೇಗೆ ಮೌಲ್ಯಮಾಪನ ಮಾಡಲಾಗುತ್ತದೆ ಮತ್ತು ಯಾರು ಮೌಲ್ಯಮಾಪನ ಮಾಡುತ್ತಾರೆ ಎಂಬುದರ ಕುರಿತು ಅದು ಮೌನ ವಹಿಸಿಬಿಡುತ್ತದೆ. ಹೆಚ್ಚಿನ ಅಂಕಗಳನ್ನು ಗಳಿಸಲು ಮಹಿಳೆಯರೇ ತಮ್ಮ ನಿಸ್ವಾರ್ಥ, ತ್ಯಾಗ ಮತ್ತು ಭಕ್ತಿ ಗುಣಗಳನ್ನು ಸಾಬೀತುಪಡಿಸಬೇಕು ಎಂದು ಭಾವಿಸಬೇಕೇ? ಇನ್ನು, ಸಂಪ್ರದಾಯವನ್ನು ಮುರಿಯುವವರ ಬಗ್ಗೆ ಅದು ಯಾವ ತೀರ್ಮಾನಕ್ಕೆ ಬರುತ್ತದೆ?

ಎರಡು

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ರಾಷ್ಟ್ರೀಯ ಶಿಕ್ಷಣ ನೀತಿಯಿಂದ (1986) ನಿಸ್ಸಂದೇಹವಾಗಿ ಒಂದು ದೊಡ್ಡ ಹಿನ್ನಡೆಯಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿಯು ಶಿಕ್ಷಣವನ್ನು "ಮಹಿಳೆಯರ ಸ್ಥಿತಿಗತಿಯಲ್ಲಿನ ಮೂಲಭೂತ ಬದಲಾವಣೆಯ ಮಧ್ಯವರ್ತಿ (ಏಜೆಂಟ್)" ಆಗಿ ನೋಡಿದೆ. "ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆ" ಯು, "ಮಹಿಳೆಯರ ಸಬಲೀಕರಣದಲ್ಲಿ ಧನಾತ್ಮಕ, ಮಧ್ಯಸ್ಥಿಕೆಯ ಪಾತ್ರವನ್ನು ವಹಿಸುತ್ತದೆ" ಎಂದು ಅದು ವಾದಿಸುತ್ತದೆ. ಆದರೆ ಇದರ ಪ್ರಗತಿಪರ ನೀತಿ ನಿರ್ವಚನದ ಪ್ರಭಾವವನ್ನು ನಾವು ವಾಸ್ತವವಾಗಿ ಸಿದ್ಧವಾಗುವ ಪಠ್ಯಪುಸ್ತಕಗಳ ಆಧಾರದ ಮೇಲೆ ನಿರ್ಣಯಿಸಬೇಕಾಗುತ್ತದೆ. ಇದು ನಿಜವಾಗಿಯೂ "ಹಿಂದಿನ ಸಂಚಿತ ವಿರೂಪಗಳನ್ನು ತಟಸ್ಥಗೊಳಿಸಿದೆಯೇ?" ಮಹಿಳೆಯರು ಮತ್ತು ಬಾಲಕಿಯರು ಹಿಂದೆ ಚಿತ್ರಿತಗೊಳ್ಳುತ್ತಿದ್ದಕ್ಕಿಂತ ಗಮನಾರ್ಹವಾಗಿ ಭಿನ್ನವಾದ ರೀತಿಯಲ್ಲಿ ಲಿಂಗತ್ವವನ್ನು ಚಿತ್ರಿಸಲಾಗಿದೆಯೇ?

ರಾಷ್ಟ್ರೀಯ ಶಿಕ್ಷಣ ನೀತಿಯ ರಚನೆಯ ನಂತರದ ದಶಕದಲ್ಲಿ 3, 5 ಮತ್ತು 8ನೇ ತರಗತಿಗಳ ಎನ್ ಸಿ ಇ ಆರ್ ಟಿ ಯ ಭಾಷಾ ಪಠ್ಯಪುಸ್ತಕಗಳ ಸಂಕ್ಷಿಪ್ತ ನೋಟ ಈ ಕೆಳಗಿನಂತಿದೆ[ii]. ಇದಕ್ಕೆ ಭಾಷಾ ಪಠ್ಯಪುಸ್ತಕಗಳನ್ನೇ ಪರಿಗಣಿಸಲು ಕಾರಣವೇನೆಂದರೆ ಸ್ತ್ರೀವಾದಿ ಶಿಕ್ಷಣಶಾಸ್ತ್ರದ ಅಭ್ಯಾಸದಲ್ಲಿ ಭಾಷೆ ಒಂದು ಪ್ರಮುಖ ವಿಷಯವಾಗಿರುವುದು. ಇದು ಲಿಂಗತ್ವ ಅಸ್ಮಿತೆಗಳ

ನಿರ್ಮಾಣ ಮತ್ತು ಸಂವಹನ ಹಾಗೂ ಅಧಿಕಾರ ಸಂಬಂಧಗಳನ್ನು ಬಲಪಡಿಸುವ ಪ್ರಬಲ ತಾಣವಾಗಿದೆ.

ಕಥೆಗಳು/ಸಂಕಥನಗಳು ಎಲ್ಲಾ ಸಂಸ್ಕೃತಿಗಳಲ್ಲೂ ಅರ್ಥವನ್ನು ಸೃಷ್ಟಿಸುತ್ತವೆ. ನಮ್ಮ ಅನುಭವಗಳನ್ನು ಕ್ರಮಬದ್ಧವಾಗಿ ಜೋಡಿಸಿ ವಿವರಿಸುವ ಮೂಲಕ, ಅವು ಪ್ರಪಂಚವನ್ನು ಅರ್ಥ ಮಾಡಿಕೊಳ್ಳಲು ನಮಗೆ ನೆರವಾಗುತ್ತವೆ. ಭಾಷೆಗೆ ಈಗಾಗಲೇ ಸ್ವಾಭಾವಿಕವಾಗಿ ಮತ್ತು ಸ್ವಯಂ-ಸ್ಪಷ್ಟವಾಗಿ ಕಾಣುವಂತೆ ನಿರ್ಮಿತವಾದದ್ದನ್ನೂ ಸಹ - ನಿಖರವಾಗಿ ಹೇಳುವುದಾದರೆ, ಈ ನಿರ್ಮಾಣವು ಪ್ರಶ್ನಾರ್ಹವಾಗಿರುವ ಹಂತದಲ್ಲಿ- ಮರುನಿರ್ವಚಿಸುವ ಶಕ್ತಿಯಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ, ಭಾಷೆಯು ಲಿಂಗ ಅಸಮಾನತೆಗಳನ್ನು ಸ್ವಾಭಾವಿಕಗೊಳಿಸಲು ಸಹಾಯ ಮಾಡುತ್ತದೆ.

ಭಾಷಾ ಪಠ್ಯಪುಸ್ತಕಗಳ ಮುನ್ನುಡಿಯಲ್ಲಿ, ಆ ಪುಸ್ತಕದ ಉದ್ದೇಶ ಮಗುವಿನ ಕ್ಷಿತಿಜವನ್ನು ವಿಸ್ತರಿಸುವುದು, ಆಲೋಚನಾ ಸಾಮರ್ಥ್ಯವನ್ನು ಹೆಚ್ಚಿಸುವುದು ಮತ್ತು ಮಗುವಿನಲ್ಲಿ ಮೌಲ್ಯಗಳನ್ನು ಬೆಳೆಸುವುದು ಎಂದು ಹೇಳಲಾಗಿದೆ. ಮುನ್ನುಡಿಯಲ್ಲಿ ವಿವರಿಸಲಾಗಿರುವ ಮೌಲ್ಯಗಳೆಂದರೆ: ಸಂಕಲ್ಪ, ಪರೋಪಕಾರಿ ಮನೋಭಾವ, ಶೌರ್ಯ, ಶಿಸ್ತು, ಸಮಯಪ್ರಜ್ಞೆ, ಕಠಿಣ ಪರಿಶ್ರಮದ ಮಹತ್ವ, ಸಮಾಜ ಸೇವೆ ಮತ್ತು ರಾಷ್ಟ್ರಪ್ರೇಮ.

ಚರ್ಚೆ ಮತ್ತು ಸಂವಹನಕ್ಕೆ ಅನುಕೂಲವಾಗುವ ವಿಧಾನಗಳ ಮೂಲಕ ಇಡೀ ತರಗತಿಯನ್ನು ಗಣನೆಗೆ ತೆಗೆದುಕೊಂಡು ಶಿಕ್ಷಕರು ಭಾಷಾ ಬೋಧನೆಯನ್ನು ನಿಭಾಯಿಸತಕ್ಕದ್ದು ಎಂದು ಮುನ್ನುಡಿಯು ಸೂಚಿಸುತ್ತದೆ. ಉದಾಹರಣೆಗೆ, ಪಾತ್ರಾಭಿನಯಗಳನ್ನು ಮಾಡಲು ಮಕ್ಕಳನ್ನು ಪ್ರೋತ್ಸಾಹಿಸುವುದು, ಇದರಿಂದ ವಿದ್ಯಾರ್ಥಿಗಳ ಸಕ್ರಿಯ ಭಾಗವಹಿಸುವಿಕೆ ಸಾಧ್ಯವಾಗುತ್ತದಲ್ಲದೆ ಸಂವಹನ ಮಾಡಲು ಅವರ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಆದಾಗ್ಯೂ, ಪಾಠಗಳ ವಿಷಯ ಮತ್ತು ನಿರೂಪಣೆಗಳನ್ನು ಗಮನಿಸಿದರೆ, ವಿಶೇಷವಾಗಿ ತರಗತಿಯಲ್ಲಿರುವ ಬಾಲಕಿಯರಿಗೆ ಸಂಬಂಧಿಸಿದಂತೆ, ಶಿಕ್ಷಕರಿಗೆ ಆ ಗುರಿಗಳನ್ನು ಸಾಧಿಸಲು ಸಾಧ್ಯವಾಗುತ್ತದೆಯೇ ಎಂದು ಸಂದೇಹವಾಗುತ್ತದೆ. ಹಿಂದೆ ಉಲ್ಲೇಖಿಸಲಾದ ಪಠ್ಯಪುಸ್ತಕಗಳಿಂದ ಆಯ್ದ 75 ಪಾಠಗಳ ವಿಮರ್ಶೆಯನ್ನು ಆಧರಿಸಿ ನೀಡಲಾದ ಈ ಕೆಳಗಿನ ಅಂಕಿಅಂಶಗಳನ್ನು ಪರಿಗಣಿಸಿ:

- ಸುಮಾರು 34 ಪಾಠಗಳಲ್ಲಿ, ಅಂದರೆ ಒಟ್ಟು 50 ಪ್ರತಿಶತದಷ್ಟು ಪಾಠಗಳಲ್ಲಿ, ಪುರುಷರು ಮತ್ತು ಬಾಲಕರು ಮಾತ್ರ ಪಠ್ಯಗಳಲ್ಲಿ ಪಾತ್ರಗಳಾಗಿದ್ದಾರೆ. ಸಂಕಥನಗಳಲ್ಲಿ ಯಾವ ಸ್ತ್ರೀ ಪಾತ್ರಗಳೂ ಇರಲಿಲ್ಲ.

- 10 ಪಾಠಗಳಲ್ಲಿ, ಮಹಿಳೆಯರ ಪಾತ್ರವು ಹೀಗೆ ಬಂದು ಹಾಗೆ ಹೋಗುತ್ತದೆ ಅಥವಾ ಸಾಂಪ್ರದಾಯಿಕ ಪಾತ್ರಗಳಿಗೆ -- ಅಂದರೆ, ತಾಯಿ, ಸಹೋದರಿಯರು, ಇತ್ಯಾದಿ- ಮಾತ್ರ ಸೀಮಿತಗೊಳಿಸಲಾಗಿದೆ
- ಸುಮಾರು 23 ಪಾಠಗಳು ಮಾಹಿತಿ ಪ್ರಸಾರದ ಗುಂಪಿಗೆ ಸೇರಿವೆ: “ಸ್ಫೋಟಗೊಳ್ಳುತ್ತಿರುವ ಜನಸಂಖ್ಯೆ”, ಆರೋಗ್ಯಕರ ಆಹಾರದಿಂದಾಗುವ ಒಳಿತು ಇತ್ಯಾದಿ ಹಲವು ನೀತಿಬೋಧಕ ತುಣುಕುಗಳಿವೆ. ಈ ವರ್ಗದಲ್ಲಿ, ಮೇಲ್ನೋಟಕ್ಕೆ ಯಾವುದೇ ಲಿಂಗ ಭೇದವನ್ನು ಹೊಂದಿರುವಂತೆ ಕಾಣದ ‘ದೋಹಾಗಳು’ (ದ್ವಿಪದಿಗಳು) ಮತ್ತು ಇತರ ಕಾವ್ಯಾತ್ಮಕ ರೂಪಗಳನ್ನು ಒಳಗೊಂಡಿರುವ ಪಾಠಗಳೂ ಸೇರಿವೆವೆ.
- ಸುಮಾರು ಹತ್ತರಲ್ಲಿ ಒಂದು ಪಾಠ- ನಿರ್ದಿಷ್ಟವಾಗಿ ಹೇಳುವುದಾದರೆ, ಎಂಟರಲ್ಲಿ ಒಂದು ಪಾಠ- ಮಹಿಳೆಯರು ಮತ್ತು ಬಾಲಕಿಯರನ್ನು ನಿಖರವಾಗಿ ‘ಬೇರೆಯ ದೃಷ್ಟಿಕೋನದಲ್ಲಿ’ ಚಿತ್ರಿಸಿವೆ. ಅವುಗಳಲ್ಲಿ, ಈಜುವಿಕೆಯ ಬಗ್ಗೆ ಒಂದು ಅಧ್ಯಾಯವಿದ್ದು ಅದು ಆ ಕ್ರೀಡೆಯಲ್ಲಿ ಸಾಧನೆ ಮಾಡಿದ ಮಹಿಳೆಯರ ಉಲ್ಲೇಖವಿದೆ. ಅಂತಹುದೇ ಇನ್ನೊಂದು ಪಾಠದಲ್ಲಿ, ಬಾಲಕಿಯೊಬ್ಬಳು ತಾನು ಮೃಗಾಲಯಕ್ಕೆ ಭೇಟಿ ಕೊಟ್ಟ ಬಗ್ಗೆ ತನ್ನ ಗೆಳತಿಗೆ ಬರೆದ ಪತ್ರವಿದೆ. ಮೂರನೆಯ ಪಾಠವು ಕ್ರೀಡಾ ದಿನಾಚರಣೆಯನ್ನು ವಿವರಿಸುತ್ತದೆ. ಇದರಲ್ಲಿ ಬಾಲಕಿಯರ ಸಕ್ರಿಯ ಪಾಲ್ಗೊಳ್ಳುವಿಕೆ ಇದೆ. ಜೊತೆಗೆ, ಇತರ ಮೂರು ಪಾಠಗಳಲ್ಲಿ ಮಹಿಳೆಯರನ್ನು ನಿಜವಾಗಿಯೂ ವಿಭಿನ್ನ ನೆಲೆಯಲ್ಲಿ ಚಿತ್ರಿಸುವ ಪ್ರಯತ್ನಮಾಡಲಾಗಿದೆ. ಈ ರೀತಿಯ ವಿರಳ ಪ್ರಯತ್ನಗಳಲ್ಲೂ ಅವುಗಳದೇ ಆದ ಸಮಸ್ಯೆಗಳು ಇವೆ. ಮೂರು ಪಾಠಗಳಲ್ಲಿ ಎರಡು ಝಾನ್ಸಿ ರಾಣಿ ಲಕ್ಷ್ಮೀಬಾಯಿ ಮತ್ತು ಮೇಡಮ್ ಕ್ಯೂರಿಯ ಜೀವನ ಚರಿತ್ರೆಗಳಾಗಿದ್ದರೆ, ಮೂರನೆಯದು ಹಳ್ಳಿಯೊಂದರಲ್ಲಿ ಓರ್ವ ಬಾಲಕಿ ಅನುಭವಿಸಿದ ತಾರತಮ್ಯವನ್ನು ಚಿತ್ರಿಸುತ್ತದೆ.

ಅವರು ಹುಟ್ಟುತ್ತಲೇ ಮಹಾನ್ ಪುರುಷರಾಗಿ ಜನಿಸಿದವರು!

ವಿಶ್ಲೇಷಣೆಯ ಉದ್ದೇಶಕ್ಕಾಗಿ, ಈ ನಿರೂಪಣೆಗಳಲ್ಲಿ ಗೌರವಾರ್ಹರೂ, ಸಾಧಕರೂ ಆದ ಪುರುಷರನ್ನು ಹೇಗೆ ಚಿತ್ರಿಸಲಾಗಿದೆ ಎಂಬುದನ್ನು ನೋಡುವುದು ಮುಖ್ಯವಾಗುತ್ತದೆ. ಪ್ರಶ್ನಾರ್ಹವಾದ ಪಠ್ಯಗಳು ಮಹಾಪುರುಷರ ಜೀವನಚರಿತ್ರೆ, ಬಾಲ್ಯದ ಅನುಭವಗಳು, ಅವರ ಆಯ್ದ ಪತ್ರಗಳು ಅಥವಾ ಘಟನಾವಳಿಗಳನ್ನು ಒಳಗೊಂಡಿವೆ. ಅವು ಹೆಚ್ಚಾಗಿ, ‘ಸಾಮಾನ್ಯವಾಗಿ ಊಹಿಸಬಹುದಾದ’- ಮಹಾತ್ಮ ಗಾಂಧಿ, ಲಾಲ್ ಬಹದ್ದೂರ್ ಶಾಸ್ತ್ರಿ, ರಾಜೇಂದ್ರ ಪ್ರಸಾದ್, ಈಶ್ವರಚಂದ್ರ ವಿದ್ಯಾಸಾಗರ, ಎಡಿಸನ್, ಚಂದ್ರಶೇಖರ್ ಆಜಾದ್, ವಿಕ್ರಮ್ ಸಾರಾಭಾಯ್, ವೀರ ಅಭಿಮನ್ಯು, ಜಗದೀಶ್ಚಂದ್ರ ಬೋಸ್, ಬಾಬಾ ಆಮ್ಟೆ, ಅರ್ಜುನ ಅಂತಹವರನ್ನು ಒಳಗೊಂಡಿವೆ.

ಅವರ ಜೀವನ ಮತ್ತು ಸಾಧನೆಗಳ ನಿರೂಪಣೆಗಳು ಬಹುತೇಕವಾಗಿ ಸಾರ್ವಜನಿಕ ಕ್ಷೇತ್ರಕ್ಕೆ ಸಂಬಂಧಪಟ್ಟಿವೆ. ಅವರ ಕುಟುಂಬ ಜೀವನ ಅಥವಾ ಅವರ ಮನೆಗಳ ವಿವರಗಳನ್ನು ನೀಡಲಾಗಿಲ್ಲ. ಬಾಬಾ ಆಮ್ಟೆಯವರ ಜೀವನ ಚರಿತ್ರೆಯಲ್ಲಿ ಅವರ ತಾಯಿಯು ಅವರ ಮೇಲೆ ಬೀರಿದ ಪ್ರಭಾವದ ಉಲ್ಲೇಖವಿದೆ. ಆದರೆ ಇದು ಮಹಾನ್ ಪುರುಷರ ಜೀವನದಲ್ಲಿ ಮಹಿಳೆಯರು ವಹಿಸಬೇಕಾದ ಸಾಂಪ್ರದಾಯಿಕ ಪೋಷಕ ಪಾತ್ರದ ಒಂದು ಅಂಶ ಮಾತ್ರವಾಗಿದೆ.

ಪುರುಷರ ಜೀವನದಲ್ಲಿ ನಡೆದ ಸಣ್ಣ ಪುಟ್ಟ ಘಟನೆಗಳಿಗೆ ಮಹತ್ತರವಾದ ಅರ್ಥವನ್ನು ಹಚ್ಚಲಾಗಿದೆ - ಉದಾಹರಣೆಗೆ, ಲಾಲ್ ಬಹದ್ದೂರ್ ಶಾಸ್ತ್ರಿಯವರ ವಿಷಯದಲ್ಲಿ, ಅವರು ತೋಟದಿಂದ ಗುಲಾಬಿಯನ್ನು ಕದ್ದದ್ದು ಮತ್ತು ಅದರ ಪರಿಣಾಮವಾಗಿ 'ಮಾಲಿ'ಯು ಆಡಿದ ಉಪದೇಶದ ಮಾತುಗಳು ಅವರ ಜೀವನವನ್ನು ಬದಲಾಯಿಸಿತು ಮತ್ತು ಭವಿಷ್ಯದ ಮಹಾನ್ ನಾಯಕರಾಗುವಂತೆ ಪ್ರೇರೇಪಿಸಿತು ಎನ್ನಲಾಗಿದೆ. ಈ ಘಟನೆಯನ್ನು ಬೇಕಾಬಿಟ್ಟಿಯಾದ ಪುರಾಣಕತೆಯನ್ನಾಗಿ ಮಾಡುವ ಬದಲು ನಿಜವಾಗಿ, ಮಾಲಿಯು ಪುಟ್ಟ ಲಾಲ್ ಬಹದ್ದೂರ್‌ಗೆ ಏನು ಹೇಳುತ್ತಾನೆ ಎಂಬುದು ಬಹಳ ಆಸಕ್ತಿದಾಯಕವಾಗಿದೆ: "ನಿನಗೆ ತಂದೆ ಇಲ್ಲ! ನಿನ್ನ ನಡವಳಿಕೆಯು ದೋಷಾರೋಪಗಳು ಬರದಂತೆ ಇರಬೇಕು. ನೀನು ಈ ಗುಲಾಬಿಯಂತೆ ಎಲ್ಲರನ್ನೂ ಮೆಚ್ಚಿಸಲು ಪ್ರಯತ್ನಿಸಬೇಕು".

ಓರ್ವ ಹುಡುಗನ ಜೀವನದಲ್ಲಿ ತಂದೆಯ ಅನುಪಸ್ಥಿತಿಯು ಗಂಭೀರ ಪರಿಣಾಮಗಳನ್ನು ಉಂಟುಮಾಡುವುದರಲ್ಲಿ ಯಾವುದೇ ಸಂದೇಹವಿಲ್ಲ. ಇದರರ್ಥ ಅವನು ಎಲ್ಲರನ್ನೂ ಮೆಚ್ಚಿಸಬೇಕೆಂದೇ? ತಂದೆಯ ಅನುಪಸ್ಥಿತಿಯನ್ನು ನೈತಿಕ ಅಧಿಕಾರದ ಅನುಪಸ್ಥಿತಿ, ಮತ್ತು ಜಗತ್ತಿನ ಪ್ರಲೋಭನೆಗಳ ವಿರುದ್ಧ ಹುಡುಗನನ್ನು ರಕ್ಷಿಸುವ ವಿಶ್ವಾಸಾರ್ಹ ವ್ಯಕ್ತಿಯ ಅನುಪಸ್ಥಿತಿ ಎಂದು ಅರ್ಥಮಾಡಿಕೊಂಡಾಗ ಮಾತ್ರ ಈ ಅರ್ಥ ಬರಬಹುದು. ಇದರ ಜೊತೆಗೆ, ಹುಡುಗನು ತನ್ನ ತಂದೆಯು ಅಕಾಲಿಕವಾಗಿ ತ್ಯಜಿಸಿ ಹೋದ ಜವಾಬ್ದಾರಿಯನ್ನು ಸರಿಯಾದ ಸಮಯದಲ್ಲಿ ತೆಗೆದುಕೊಳ್ಳಬೇಕೆಂಬ ನಿರೀಕ್ಷೆಯೂ ಇದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಜವಾಬ್ದಾರಿಯುತ ಪುರುಷ ನಾಯಕತ್ವದ ನೆರಳಿನಲ್ಲಿ ಕುಟುಂಬವನ್ನು ಕಲ್ಪಿಸಿಕೊಂಡಂತೆ.

ಪುರುಷರ ದೈನಂದಿನ ಜೀವನದ ಪ್ರತಿ ಕ್ಷಣದಲ್ಲೂ, ಮುಖ್ಯವಾಗಿ, ಬಾಲ್ಯಕಾಲದ ಅವಧಿಯಲ್ಲಿ ಅವರು ಶ್ರೇಷ್ಠರಾಗಿ ಹುಟ್ಟಿರುತ್ತಾರೆ ಅಥವಾ ಶ್ರೇಷ್ಠತೆಯನ್ನು ಸಾಧಿಸುತ್ತಾರೆ ಎಂಬ ನಂಬಿಕೆ ಇರುವುದರಿಂದ ಅಚ್ಚರಿ, ಧೈರ್ಯ, ಶಕ್ತಿ, ದೃಢತೆ ಮತ್ತು ಹೋರಾಟದ ಸಂಗತಿಗಳು ಇರುತ್ತವೆ.

ಹೆಣ್ಣು ಮಕ್ಕಳು ಇರುವುದೇ ಅದಕ್ಕಾಗಿ!

ಇದಕ್ಕೆ ವ್ಯತಿರಿಕ್ತವಾಗಿ, ಇಬ್ಬರು ವೀರಮಹಿಳೆಯರ ಯಾರೂ ಅರಿಯದ ಕೆಲವು ವಿವರಗಳೊಂದಿಗೆ ಅವರ ಶೌರ್ಯ ಸಾಹಸ ಗಾಥೆಯನ್ನೂ ಸಹ ಪಠ್ಯದಲ್ಲಿ ಉಲ್ಲೇಖಿಸಲಾಗಿದೆ.

ಝಾನ್ಸಿಯ ರಾಣಿಯು ನಿಸ್ಸಂದೇಹವಾಗಿ ಉತ್ತಮವಾಗಿ ಕುದುರೆ ಸವಾರಳೂ ಹಾಗೆಯೇ ಹೋರಾಟಗಾರ್ತಿಯೂ ಆಗಿದ್ದಳು. ಆದರೆ ಅವಳೂ ಸಹ ಖಿನ್ನತೆಗೆ ಗುರಿಯಾಗುತ್ತಿದ್ದಳು (ತನ್ನ ಮಗ ಮತ್ತು ಗಂಡನ ಮರಣದ ವಿಷಯದಲ್ಲಿ) ಮತ್ತು ಎಲ್ಲವನ್ನೂ ಅನುಮಾನಾಸ್ಪದವಾಗಿ ನೋಡುತ್ತಿದ್ದಳು (ರಾಣಿಯು ಯಾವಾಗಲೂ ಪ್ರಾರ್ಥನೆಯಲ್ಲಿ ತೊಡಗುತ್ತಿದ್ದಳು ಮತ್ತು ಪ್ರಪಂಚದ ಜಂಜಾಟದಿಂದ ದೂರ ಇರಲು ಬಯಸುತ್ತಿದ್ದಳು). ಅವಳು ಬ್ರಿಟಿಷರ ವಿರುದ್ಧ ಹೋರಾಡಲು ಹಿಂತಿರುಗಿದಾಗಲೂ ಸಹ, ಆಧ್ಯಾತ್ಮಿಕ ರಕ್ಷಣೆಯ ಆಶ್ರಯವನ್ನು ಅವಲಂಬಿಸಬೇಕಾಗಿತ್ತು. ಪ್ರತಿದಿನ ಲೌಕಿಕ ಜೀವನವನ್ನು ಪ್ರಾರಂಭಿಸುವ ಮೊದಲು ಅವಳು ಬೆಳಿಗ್ಗೆ ಪ್ರಾರ್ಥನೆ ಮಾಡುತ್ತಿದ್ದಳು ಎಂದು ಹೇಳಲಾಗುತ್ತದೆ. ಇಂತಹ ಯಾವುದೇ ದ್ವಂದ್ವ, ಸಂದೇಹಗಳು ಮಹಾಪುರುಷರ ಜೀವನದಲ್ಲಿ ಅವರನ್ನು ಕಾಡುವುದಿಲ್ಲ. ಅವರು ತಮಗೆ ಎದುರಾಗುವ ಎಲ್ಲಾ ಸವಾಲುಗಳನ್ನು ಪ್ರಶಾಂತವಾಗಿ, ಆತ್ಮವಿಶ್ವಾಸದಿಂದ ಎದುರಿಸುತ್ತಾರೆ.

ಮಹಿಳೆಯರನ್ನು ದ್ವಂದ್ವ, ಸಂದೇಹಗಳು ಕಾಡದಿದ್ದರೂ ಅಷ್ಟೇ ಮುಖ್ಯವಾದ ಇತರ 'ವ್ಯಾಕುಲ'ಗಳು ಅವರ ಮೇಲೆ ಎರಗುತ್ತವೆ. ಮೇಡಮ್ ಕ್ಯೂರಿಯನ್ನು ಉದಾಹರಣೆಯಾಗಿ ತೆಗೆದುಕೊಳ್ಳುವುದಾದರೆ, ಅವಳು ಪ್ರಯೋಗಾಲಯದಲ್ಲಿ ತೊಡಗಿಸಿಕೊಂಡು, ರಾಸಾಯನಿಕ ದ್ರವಗಳು, ಪರೀಕ್ಷಾ ಕೊಳವೆಗಳು ಮತ್ತು ಸಂಕೀರ್ಣವಾದ ಪ್ರಾಯೋಗಿಕ ಸಾಧನಗಳ ಮಧ್ಯೆ ಇದ್ದರೂ, ಅವಳ ಪತಿಯೂ ಒಬ್ಬ ವಿಜ್ಞಾನಿಯಾಗಿದ್ದರೂ "ಮರಿಯಾ ಎಲ್ಲಾ ಮನೆಗೆಲಸವನ್ನು ತಾನೇ ಸ್ವತಃ ಮಾಡುತ್ತಿದ್ದಳು. ಅವಳು ಮನೆಯನ್ನು ಶುಚಿಗೊಳಿಸುತ್ತಿದ್ದಳು, ಬಟ್ಟೆ ಒಗೆಯುತ್ತಿದ್ದಳು, ಅಡುಗೆ ಮಾಡುತ್ತಿದ್ದಳು ಮತ್ತು ಪಾತ್ರೆಗಳನ್ನು ತೊಳೆಯುತ್ತಿದ್ದಳು. ಮದುವೆಯಾದ ಎರಡು ವರ್ಷಗಳಲ್ಲಿ ಮರಿಯಾ ಒಂದು ಹೆಣ್ಣು ಮಗುವಿಗೆ ಜನ್ಮ ನೀಡಿದಳು. ಇದು ಅವಳ ಕೆಲಸದ ಹೊರೆಯನ್ನು ಹೆಚ್ಚಿಸಿತಾದರೂ, ಅವಳ ಕೆಲಸದ ಗುಣಮಟ್ಟದ ಮೇಲೆ ಪರಿಣಾಮ ಬೀರಲಿಲ್ಲ". ಎಂದು ತಿಳಿಸಲಾಗುತ್ತದೆ. ಇವು ಮಹಿಳೆಯರ ಅತಿಯಾದ ಹೊರೆಯನ್ನು ವಿವರಿಸುವ ಉತ್ತಮ ವರ್ಣನೆಯಲ್ಲವೇ! ಅಷ್ಟು ಮುಖ್ಯವಲ್ಲದ ಪ್ರಕರಣಗಳನ್ನು ನೋಡುವುದರ ಹೊರತಾಗಿ, ಮಹಿಳೆಯರು ತಾವು ಆಯ್ಕೆ ಮಾಡಿಕೊಂಡರೆ, ಮನೆಯಲ್ಲಿ ಕೆಲಸ ಮಾಡಿಕೊಂಡು ಮಾನವ ಕಲ್ಯಾಣದಂಥ ದೊಡ್ಡ ಉದ್ದೇಶಕ್ಕೆ 'ಕೊಡುಗೆ' ನೀಡುತ್ತಾ ಉತ್ಕೃಷ್ಟವಾಗಿರಬಲ್ಲರು ಎಂಬುದು ಇದರ ಇಂಗಿತವಾಗಿದೆ. ಆದಾಗ್ಯೂ, ಅಂತಿಮವಾಗಿ, ಶ್ರೇಷ್ಠ ಸಾಧಕಿಯರು ಮನೆವಾರ್ತೆಗೆ ಸಂಬಂಧಿಸಿದ ಕರ್ತವ್ಯಗಳಲ್ಲಿಯೂ ತೊಡಗಬಲ್ಲರೆಂಬ ಈ ವಿಕಲ್ಪವು ವಿಭಿನ್ನ ಅರ್ಥ ಮತ್ತು ಉದ್ದೇಶವನ್ನು ಹೊಂದಿದೆ. ಅದು ಸಾಮಾನ್ಯ ಓದುಗರಿಗೆ ಈ ಮಹಿಳೆಯರನ್ನು 'ಸಾಮಾನ್ಯ' ಎಂದು ನಿರೂಪಿಸುವ ಉದ್ದೇಶದ್ದಾಗಿರುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಈ ಉದ್ದೇಶ ಅವರನ್ನು

ಪಳಗಿಸುವುದಾಗಿದೆ, ವಿಶೇಷ ಮಹಿಳೆಯರೆಂಬ ಅವರ ಅಸ್ತಿತ್ವದಿಂದೊದಗುವ 'ಅಪಾಯಗಳನ್ನು' ನಿಗ್ರಹಿಸುವುದಾಗಿದೆ. ಮಹಾಪುರುಷರ ಜೀವನಕ್ಕೆ ಹೋಲಿಸಿದರೆ ಇದು ಒಂದು ಕಠೋರ ವೈರುಧ್ಯವನ್ನು ಮುಂದೊಡ್ಡುತ್ತದೆ. ಇಲ್ಲಿ ಜೀವನಕ್ಕಿಂತ ಹೆಚ್ಚಾಗಿ ಅವರ ಸುತ್ತ ಕಟ್ಟುಕಥೆಗಳನ್ನು ಸೃಷ್ಟಿಸಲು ಮತ್ತು ಅವರನ್ನು ದೈವೀಕರಿಸಲು ಒತ್ತು ನೀಡಲಾಗುತ್ತದೆ. ಸಾಧ್ಯವಾದಷ್ಟು ಅವರನ್ನು ಕೈಗೆ ನಿಲುಕದವರಂತೆ, ಎತ್ತರದ ಜಾಗದಲ್ಲಿ ಇರುವವಂತೆ ಚಿತ್ರಿಸಲಾಗುತ್ತದೆ.

ಒಟ್ಟಿನಲ್ಲಿ ಝಾನ್ಸಿ ರಾಣಿ ಮತ್ತು ಮೇರಿ ಕ್ಯೂರಿಯ ಸಾಧನೆಗಳಿಗೆ ಲಗಾಮು ಹಾಕಬೇಕು; ಅಡುಗೆ ಮಾಡಲು, ಪಾತ್ರೆ ತೊಳೆಯಲು, ಸ್ವಚ್ಛಗೊಳಿಸಲು ಮತ್ತು ಪ್ರಾರ್ಥನೆ ಮಾಡಲು ಅವರನ್ನು ಸೀಮಿತಗೊಳಿಸಿ ಆ ಮೂಲಕ ಅವರನ್ನು 'ಸಾಮಾನ್ಯಗೊಳಿಸಬೇಕು'; ಅವರು ಈ ಪ್ರಪಂಚದಿಂದ ತೀರಾ ಹೊರಗುಳಿಯದಂತೆ, ತುಂಬಾ ವಿಭಿನ್ನವಾಗಿರದಂತೆ, ಹೆಚ್ಚು ಸವಾಲು ಒಡ್ಡದಂತೆ ಅವರನ್ನು ಪಳಗಿಸಲಾಗಿದೆ. ಇತರ ಪುರುಷ ವಿಜ್ಞಾನಿಗಳಾದ ವಿಕ್ರಮ್ ಸಾರಾಭಾಯ್ ಮತ್ತು ಜಗದೀಶ್ ಚಂದ್ರ ಬೋಸ್ ರವರ ಜೀವನಚರಿತ್ರೆಗಳಿಗಿಂತ ಮೇಡಮ್ ಕ್ಯೂರಿಯವರ ಜೀವನಚರಿತ್ರೆಯಲ್ಲಿನ ವಿವರಣೆಯು ಗಮನಾರ್ಹವಾಗಿ ಭಿನ್ನವಾಗಿದೆ. ಇಲ್ಲಿ ಪುರುಷರಿಗೆ ತಾವು ಏನು ಮಾಡುತ್ತಿದ್ದೇವೆ ಅಥವಾ ಏನನ್ನು ಸಾಧಿಸಲು ಬಯಸುತ್ತಿದ್ದೇವೆ ಎಂಬಲ್ಲಿ ಸ್ಪಷ್ಟತೆ ಇದೆ ಇತರ ಮಹಾನ್ ಪುರುಷರಂತೆ ಇವರುಗಳಿಗೆ ಮಹತ್ವಪೂರ್ಣವಾದ ಆತ್ಮವಿಶ್ವಾಸವಿದೆ. ಜೊತೆಗೆ, ಇವರುಗಳು ಮನೆವಾರ್ತೆಯ ಜಂಜಾಟಗಳಿಂದ ಮುಕ್ತರಾಗಿದ್ದರು, ತಮ್ಮ ವೃತ್ತಿಜೀವನಕ್ಕೆ ಸಂಬಂಧಿಸಿದಂತೆ ಯಾವುದೇ ಸಂದೇಹ ಅಥವಾ ಖಿನ್ನತೆಯಿಂದ ಸಹ ಮುಕ್ತರಾಗಿದ್ದರು. ಝಾನ್ಸಿ ರಾಣಿಯ ಕಥೆಯ ಮುಕ್ತಾಯದ ಸಾಲುಗಳು ಉಲ್ಲೇಖಾರ್ಹ: "ತನ್ನ *ತ್ಯಾಗದ* ಮೂಲಕ ರಾಣಿಯು *ಒಂದು ವೇಳೆ ಅಂಥ ಸಂದರ್ಭ ಬಂದರೆ,* [ನಿಸ್ಸಂದೇಹವಾಗಿ, ಅಸಾಧಾರಣ ಸಂದರ್ಭಗಳಲ್ಲಿ] ಭಾರತೀಯ ಮಹಿಳೆ ಸಹ ಶತ್ರುಗಳಿಗೆ ತಕ್ಕ ಪಾಠವನ್ನು ಕಲಿಸಬಲ್ಲಳು ಎಂಬುದನ್ನು ಸಾಬೀತುಪಡಿಸಿದಳು."

ಹುಡುಗರು ಮತ್ತು ಪುರುಷರ ಕುರಿತು

ಈ ಪಠ್ಯಗಳು ಹೆಣ್ಣು ಮಗುವಿನ ಮುಂದೆ ಇಡುವ ಮಾದರಿಗಳ ಬಗ್ಗೆ ಪ್ರಶ್ನೆಗಳನ್ನು ಎತ್ತುತ್ತದೆ. ಚಿಕ್ಕ ಬಾಲಕರು ಇತರ ನಿರೂಪಣೆಗಳಲ್ಲಿ ಪ್ರಾಬಲ್ಯ ಸಾಧಿಸಿರುವುದನ್ನು ಗಮನಿಸಿದರೆ ಅವಳನ್ನು ಎಷ್ಟರ ಮಟ್ಟಿಗೆ ನಿರ್ಲಕ್ಷಿಸಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಗಂಡು ಮಕ್ಕಳು ತಮಗೆ ಎದುರಾಗುವ ಎಲ್ಲಾ ಅಡ್ಡಿ ಆತಂಕಗಳ (ಕುರುಡುತನ, ಪೋಷಕರಿಲ್ಲದಿರುವಿಕೆ) ಹೊರತಾಗಿಯೂ ನೈತಿಕತೆ, ಧೈರ್ಯ, ಕಠಿಣ ಪರಿಶ್ರಮ, ಎದೆಗಾರಿಕೆ ಮತ್ತು ದೃಢ ನಿರ್ಣಯಗಳಂತಹ ಉನ್ನತ ಸದ್ಗುಣಗಳಿಗಾಗಿ ಮತ್ತು ಮಿತಿಯಿಲ್ಲದ ಬೌದ್ಧಿಕ ಹಸಿವನ್ನು ತಣಿವಿಗಾಗಿ ಶ್ರಮಿಸುತ್ತಾರೆ ಎಂದು ಬಿಂಬಿಸಲಾಗುತ್ತದೆ. (ಆದರೆ ಹೆಣ್ಣು ಮಕ್ಕಳ ವಿಷಯದಲ್ಲಿ ಕಲಿಕೆ ಎಂಬುದರ ಅರ್ಥವೇನು?)

ಎಲ್ಲಾ ಮೂರು ಪಠ್ಯಪುಸ್ತಕಗಳಲ್ಲಿಯೂ ಬಾಲಕರು ಹೆಚ್ಚಿನ ಚಲನಶೀಲತೆಯನ್ನು ಪ್ರದರ್ಶಿಸುವುದನ್ನು ಸಮಾನವಾಗಿ ಕಾಣಬಹುದಾಗಿದೆ. ಅವರು ತಾವೇ ಸ್ವತಃ ವಿವಿಧ ಸ್ಥಳಗಳಿಗೆ ಪ್ರಯಾಣಿಸಬಲ್ಲರು ಮತ್ತು ಹೊಸ ಅನುಭವಗಳಿಗೆ ಪ್ರತಿಕ್ರಿಯಿಸಬಲ್ಲರು ಮತ್ತು ಆ ಅನುಭವಗಳನ್ನು ವಿವರಿಸಬಲ್ಲರು. ಈ ಬಗೆಯ ಪ್ರವಾಸಗಳಲ್ಲಿ ಮಹಿಳೆಯರು ಕಾಣಿಸಿಕೊಂಡರೂ ಅವರಿಗೆ ತಿಳುವಳಿಕೆ ಅಥವಾ ಜ್ಞಾನದ ಕೊರತೆ ಇದೆ ಎಂಬಂತೆ ತೋರಿಸಲಾಗುತ್ತದೆ. ಉದಾಹರಣೆಗೆ 'ತಮಿಳುನಾಡು ಕಿ ಯಾತ್ರಾ' ಎಂಬ ಪಾಠದಲ್ಲಿ ದಿನೇಶ್ ಮೊದಲ ಬಾರಿಗೆ ಚೆನ್ನೈಗೆ ಭೇಟಿ ನೀಡುತ್ತಾನೆ. ಅವನ ಸ್ನೇಹಿತ ಅವನನ್ನು ನಿಲ್ದಾಣದಿಂದ ಕರೆತರಲು ಹೋಗುತ್ತಾನೆ. ಅವರು ನಿಲ್ದಾಣದಿಂದ ಹೊರಡುವ ಮುಂಚೆಯೇ ದಿನೇಶ್ ತನ್ನ ಸ್ನೇಹಿತನಿಗೆ ಆ ರಾಜ್ಯದ ಭೌಗೋಳಿಕ ವಿವರಗಳ ಬಗ್ಗೆ ಹೇಳಲು ಪ್ರಾರಂಭಿಸುತ್ತಾನೆ. ತನ್ನ ಜೀವಮಾನದುದ್ದಕ್ಕೂ ಚೆನ್ನೈನಲ್ಲಿ ವಾಸಿಸುತ್ತಿದ್ದ ಅವನ ಸ್ನೇಹಿತನ ಹೆಂಡತಿ ಮಾಯಾ ಹೀಗೆ ಹೇಳುತ್ತಾಳೆ: "ಅಣ್ಣಾ, ನಾನು ಮೊದಲ ಬಾರಿಗೆ ನನ್ನ ರಾಜ್ಯದ ಬಗ್ಗೆ ಈ ವಿಶೇಷ ಸಂಗತಿಗಳನ್ನು ಕೇಳುತ್ತಿದ್ದೇನೆ. ನಿಮಗೆ ಇಷ್ಟೊಂದು ವಿಷಯ ಹೇಗೆ ಗೊತ್ತಾಯಿತು?"

ಪ್ರವಾಸ ಕಥನದಲ್ಲಿ ನಾವು ಮತ್ತಷ್ಟು ಮುಂದುವರಿದಂತೆ, ದಿನೇಶನ ಹೆಂಡತಿ ಮೀನುಗಾರರ ಬಲೆಯಲ್ಲಿ ಸಿಕ್ಕಿಬಿದ್ದಿದ್ದ ಮೀನುಗಳ ಪ್ರಮಾಣವನ್ನು ನೋಡಿ ಆಶ್ಚರ್ಯಚಕಿತಳಾಗುತ್ತಾಳೆ. ಅವಳು, "ಛಿ!ಛಿ! ಓ ದೇವರೇ, ಎಂತಹ ಹೃದಯಹೀನರು! ಈ ಮೀನುಗಾರರು ಈ ಎಲ್ಲಾ ಮೀನುಗಳನ್ನು ಕೊಲ್ಲುತ್ತಿದ್ದಾರೆ. ಈ ಮೀನುಗಳು ಅವರಿಗೇನು ಕೇಡು ಮಾಡಿವೆ!.. ಈ ನೀಚ ಮೀನುಗಾರರು ಮೀನುಗಳು ಮಲಗಿರುವಾಗ (ರಾತ್ರಿಯಲ್ಲಿ) ಅವುಗಳನ್ನು ಹಿಡಿಯುತ್ತಾರೆ" ಎಂದು ಉದ್ಗರಿಸುತ್ತಾಳೆ. ಅವಳ ಈ ಮಾತುಗಳನ್ನು ಕೇಳಿ "ನಾವೆಲ್ಲಾ ಹೊಟ್ಟೆ ಹುಣ್ಣಾಗುವಷ್ಟು ನಕ್ಕು ಸುಸ್ತಾದೆವು" ಎಂದು ನಿರೂಪಕರು ಹೇಳುತ್ತಾರೆ.

ಇಲ್ಲಿಯ ಪ್ರಶ್ನೆ ಏನೆಂದರೆ, ಈ ನಿರೂಪಣೆಯನ್ನು ಯಾರು ಯಾರಿಗೆ ಹೇಳುತ್ತಿದ್ದಾರೆ? ಈ ಬಗೆಯ ನಿರೂಪಣೆಗಳಲ್ಲಿ ಬೇರೆಯವರನ್ನು ಬಿಟ್ಟು ಮಹಿಳೆಯರಲೇ ಏಕೆ ಸ್ಥಾನ ಪಡೆದುಕೊಳ್ಳುತ್ತಾರೆ?

ಓರ್ವ ವಯಸ್ಕ ಮಹಿಳೆಯಾಗಿದ್ದರೂ, ಮಾಯಾ ತನ್ನ ಜೀವನವಿಡೀ ವಾಸಿಸಿದ ಸ್ಥಳದ ಬಗ್ಗೆ ಮಾಹಿತಿಯ ಕೊರತೆಯಿಂದ ಬಳಲುವುದಲ್ಲದೆ, ಆಕೆಯ ಪ್ರತಿಕ್ರಿಯೆಗಳು ವಿಶಿಷ್ಟವಾಗಿ ನಿಷ್ಕಪಟ ಮತ್ತು ಮುಗ್ಧತೆಯಿಂದ ಕೂಡಿದವಾಗಿವೆ ಮತ್ತು ಅವುಗಳನ್ನು ಗಂಭೀರವಾಗಿ ಪರಿಗಣಿಸಲು ಸಾಧ್ಯವಾಗದಂತೆ ಸಹ ಇವೆ. ಪಾಠದುದ್ದಕ್ಕೂ ತಮಿಳುನಾಡಿನ ಬಗ್ಗೆ ತಿಳಿದುಕೊಳ್ಳಲು ಯೋಗ್ಯವಾದ ಎಲ್ಲಾ ವಿವರಣೆಗಳನ್ನು ಪುರುಷ ನಿರೂಪಕನ ಧ್ವನಿಯು ನಮಗೆ ನೀಡುತ್ತದೆ.

ಮಹಿಳೆಯರು ಇರುವಂತೆಯೇ ಅವರನ್ನು ನೋಡುವುದಾದರೆ?

ಮಹಿಳೆಯರು ಮುಖ್ಯವಾಗಿ ತಾಯಂದಿರ ಪಾತ್ರಗಳಲ್ಲಿ ಕಂಡು ಬರುತ್ತಾರೆ- 'ಕದಂಬ್ ಕಾ ಪೇಡ್' ಎಂಬ ಕವಿತೆಯಲ್ಲಿ ತಾಯಿಯ ಪ್ರೀತಿಯು ಅಡೆತಡೆಯಿಲ್ಲದಂತೆ. ಅದೇ ಇತರ ಸಂದರ್ಭಗಳಲ್ಲಿ ಅವರು ತಮ್ಮ ಮಕ್ಕಳನ್ನು ಪ್ರೇರೇಪಿಸುತ್ತಾರೆ, ಸ್ವಾತಂತ್ರ್ಯ ಹೋರಾಟ ಸಂದರ್ಭದ ಆದರ್ಶ ನಾರಿಯರಂತೆ, ರಾಷ್ಟ್ರದ ಪ್ರಸ್ತುತ ಮತ್ತು ಭವಿಷ್ಯದ ಪೀಳಿಗೆಯ ತಾಯಂದಿರಂತೆ ಅವರು ತಮ್ಮ ಪುತ್ರರನ್ನು ರಾಷ್ಟ್ರದ ಸೇವೆಯಲ್ಲಿ ತೊಡಗಿಕೊಳ್ಳುವಂತೆ ಮಾಡುತ್ತಾರೆ.

ಆದರೆ ಸ್ತ್ರೀತ್ವ ಮತ್ತು ಪುರುಷತ್ವ ಎಂಬುದನ್ನು ರೂಪಿಸುವ ಅಂಶಗಳಾವುವು ಎಂಬುದು ಕಥೆಗಳು ಮತ್ತು ಕವಿತೆಗಳಲ್ಲಿ ಬಹಳ ಗಮನಾರ್ಹವಾಗಿ ಅಭಿವ್ಯಕ್ತವಾಗುತ್ತದೆ. ಸ್ತ್ರೀತ್ವವೆಂಬುದು ಪ್ರಕೃತಿಗೆ ಹತ್ತಿರವಾದುದು, ಪುರುಷತ್ವವೆಂಬುದು ಸಂಸ್ಕೃತಿಗೆ ಸಂಬಂಧಿಸಿದ್ದು,ಪುರುಷತ್ವವೆಂಬುದು ಹೋರಾಡಿ ಸಾಧಿಸಿಕೊಳ್ಳುವಂತಹ ಸಂಗತಿಯಾಗಿದೆ. ಉದಾಹರಣೆಗೆ, ಪಕ್ಷಿಗಳು ತಮ್ಮ ಮಧುರವಾದ ಕಂಠದಿಂದ ಹಿತವಾಗಿ ಹಾಡುತ್ತಾ ಯಕ್ಷಯಕ್ಷಿಣಿಯರೊಂದಿಗೆ ನೃತ್ಯ ಮಾಡುತ್ತಾ, ಉದ್ಯಾನದಲ್ಲಿ ನೃತ್ಯ ಮಾಡುವ ಹೂವುಗಳ ಸುತ್ತಲೂ ಝೇಂಕರಿಸುವಾಗ, ಅವು ಸ್ತ್ರೀತ್ವದ ಸಾಕಾರ ರೂಪಗಳಾಗಿವೆ. ಅಂದರೆ, ಮೃದು, ಕೋಮಲ ಮತ್ತು ದುರ್ಬಲ ಸ್ವಭಾವದವಾಗಿರುತ್ತವೆ.

ಮೂರನೇ ತರಗತಿಯ ಭಾಷಾ ಪಠ್ಯಪುಸ್ತಕದಲ್ಲಿ 'ಥಾರ್ ದಿ ಸ್ಪ್ಯಾರೋ' ಎಂಬ ಶೀರ್ಷಿಕೆಯ ಒಂದು ಕಥೆ ಇದೆ- ಇದು ಚಿಕ್ಕ ಮಕ್ಕಳಿಗೆ ಪುರುಷತ್ವ ಮತ್ತು ಸ್ತ್ರೀತ್ವದ ಗುಣಲಕ್ಷಣಗಳನ್ನು ವಿವರಿಸುತ್ತದೆ.

ಅವನ ಹೆಸರು ಬಲರಾಮ. ಅವನ ಹಳ್ಳಿಯ ಹೆಸರು ಪೋಖಾರಿ. ಅವನದು ಕೃಷಿ ಕೆಲಸ. ಇಲ್ಲಿನ ಸಮಸ್ಯೆ ಏನೆಂದರೆ ಅವನಿಗೆ ಕೃಷಿ ಕೆಲಸದಲ್ಲಿ ಆಸಕ್ತಿ ಇರಲಿಲ್ಲ. ಅವನ ಪೂರ್ವಜರ ಜಮೀನೆಲ್ಲ ಸಾಗುವಳಿ ಮಾಡದೆ ಬರಡಾಗಿ ಬಿದ್ದಿತ್ತು. ಅವನೀಗ ಏನು ಮಾಡಬೇಕು! ಅವನಿಗೆ ಪ್ರತಿದಿನವೂ ಹಸಿವಾಗುತ್ತಿತ್ತು. ಕಾಡಿಗೆ ಹೋಗಿ ಹಣ್ಣುಗಳನ್ನು ತಿಂದು ಬದುಕುತ್ತಿದ್ದನು. ಹಣ್ಣುಗಳು ಸಿಗದಿದ್ದಾಗ ಸೌದೆ ಸಂಗ್ರಹಿಸಿ ಹಳ್ಳಿಯವರಿಗೆ ಮಾರಿ ಅನ್ನ ಸಂಪಾದಿಸುತ್ತಿದ್ದನು. ಹೇಗೋ ಅವನು ಹೊಟ್ಟೆಯನ್ನು ತುಂಬಿಸಿಕೊಳ್ಳುತ್ತಿದ್ದನು. ಕೆಲವೊಮ್ಮೆ ಅವನು ತನ್ನ ಪೂರ್ವಜರ ಭೂಮಿಯನ್ನು ಉಳುಮೆ ಮಾಡಲು ಯೋಚಿಸುತ್ತಿದ್ದನು. ಆದರೆ ಕೃಷಿ ಕೆಲಸದಲ್ಲಿ ಅವನಿಗೆ ಆಸಕ್ತಿ ಇರಲಿಲ್ಲ, ಆ ಸಾಮರ್ಥ್ಯವೂ ಅವನಿಗಿರಲಿಲ್ಲ. ಒಂದು ದಿನ ಬಲರಾಮನು ಕಾಡಿನಲ್ಲಿ ಸೌದೆ ಸಂಗ್ರಹಿಸುತ್ತಿದ್ದನು. ಇದ್ದಕ್ಕಿದ್ದಂತೆ ಅವನ ಕೈಗೆ ತುಂಬಾ ಮೃದುವಾದ ಯಾವುದೋ ವಸ್ತು ತಾಗಿತು ಮತ್ತು ಅದರಿಂದ ಅವನಿಗೆ ಕ್ಷೀಣವಾದ ಶಬ್ದ ಕೇಳಿ ಬರುತ್ತಿತ್ತು. ಕುತೂಹಲದಿಂದ ನೋಡಿದಾಗ ಅವನಿಗೆ ಅಲ್ಲಿ ಒಂದು ಸಣ್ಣ ಗುಬ್ಬಚ್ಚಿ ಕಾಣಿಸಿತು. ಬಲರಾಮ ಆ ಗುಬ್ಬಚ್ಚಿಯನ್ನು ಎತ್ತಿಕೊಂಡನು. ಅದು ದುರ್ಬಲವಾಗಿದ್ದು,

ಅನಾರೋಗ್ಯದಿಂದ ಬಳಲುತ್ತಿತ್ತು. ಆ ಹಕ್ಕಿ ತನಗೆ ಏನನ್ನೋ ಹೇಳುತ್ತಿದೆ ಎಂದು ಅವನಿಗೆ ಅನಿಸಿತು.

ಹಕ್ಕಿಗೆ ಬಾಯಾರಿಕೆಯಾಗಿರಬೇಕು ಎಂದು ಭಾವಿಸಿ ಅವನು ಅದಕ್ಕೆ ಕೆಲವು ಹನಿ ನೀರು ಕುಡಿಸಿದನು. ತಿನ್ನಲು ಹಣ್ಣನ್ನು ನೀಡಿದನು. ದಿನವಿಡೀ ಆ ಹಕ್ಕಿಯನ್ನು ಹೆಗಲ ಮೇಲೆ ಹೊತ್ತು ತಿರುಗಾಡಿದನು.

ಸಂಜೆ ಅವನು ತನ್ನ ನೆರೆಮನೆಗಳಿಗೆ ಹೋಗಿ ಸೌದೆ ಕೊಟ್ಟು ಅದಕ್ಕೆ ಬದಲಾಗಿ ಸ್ವಲ್ಪ ಧಾನ್ಯಗಳನ್ನು ಖರೀದಿಸಿದನು. ಬಲರಾಮ ಹಕ್ಕಿಗೆ ಧಾನ್ಯವನ್ನು ಕೊಟ್ಟು, "ಪ್ರಿಯ ಪಕ್ಷಿಯೇ, ಈಗ ನನ್ನ ಮನೆಯಲ್ಲಿಯೇ ಇರು. ನೀನು ಸುಧಾರಿಸಿಕೊಂಡ ಮೇಲೆ ಹಾರಿ ಹೋಗಬಹುದು." ಎಂದನು.

ಬಲರಾಮನ ಮನೆಯಲ್ಲಿ ಹಕ್ಕಿಯು ಸಂತಸದಿಂದಿತ್ತು. ಪ್ರತಿದಿನ ಅದು ಅವನ ಭುಜದ ಮೇಲೆ ಕುಳಿತು ಕಾಡಿಗೆ ಹೋಗುತ್ತಿತ್ತು. ದಾರಿಯಲ್ಲಿ ಅದು ಅವನಿಗಾಗಿ ಮಧುರವಾದ ಹಾಡುಗಳನ್ನು ಹಾಡುತ್ತಿತ್ತು. ಸಂಜೆ ಅವನೊಂದಿಗೆ ಹಿಂತಿರುಗುತ್ತಿತ್ತು. ಬಲರಾಮನೂ ಸಹ ಗುಬ್ಬಚ್ಚಿಯ ಬಗ್ಗೆ ಸಾಕಷ್ಟು ಕಾಳಜಿ ವಹಿಸುತ್ತಿದ್ದನು. ಈಗ ಅವನು ಪ್ರತಿನಿತ್ಯವೂ ಸೌದೆ ಕಡಿಯಲು ಹೋಗುತ್ತಿದ್ದನು ಮತ್ತು ಅದನ್ನು ಮಾರಿ ತನಗೆ ಮತ್ತು ಗುಬ್ಬಚ್ಚಿಗೆ ಪ್ರತಿದಿನ ಆಹಾರವನ್ನು ಪಡೆಯುತ್ತಿದ್ದನು. ಇಬ್ಬರೂ ಪರಸ್ಪರ ಹರಟೆ ಹೊಡೆಯುತ್ತಿದ್ದರು. ನಿಧಾನವಾಗಿ ಬಲರಾಮನು ಪಕ್ಷಿಯನ್ನು ಪ್ರೀತಿಸತೊಡಗಿದನು. ಅವನು ಒಬ್ಬ ಸಂಗಾತಿಯನ್ನು ಕಂಡುಕೊಂಡನು.

ಹಕ್ಕಿಯು ಚೇತರಿಸಿಕೊಂಡಂತೆ, ಅದು ಅಲ್ಲಿಂದ ಹೊರಡುವ ಸಾಧ್ಯತೆಯು ನಿಜವಾಯಿತು. ಅಂತಿಮವಾಗಿ, ಬಲರಾಮ ತನ್ನ ಅನುತ್ಪಾದಕ ಭೂಮಿಯಲ್ಲಿ ಕೆಲಸ ಮಾಡಲು ಪ್ರಾರಂಭಿಸಿದನು. ಅವನು ತುಂಬಾ ಕಷ್ಟಪಟ್ಟು ಕೆಲಸ ಮಾಡಿದನು. ಆ ಸಮಯದಲ್ಲೆಲ್ಲಾ ಹಕ್ಕಿಯು ಅವನ ಸುತ್ತ ಹಾರುತ್ತಲೇ ಇತ್ತು.

ಸ್ವಲ್ಪ ಸಮಯದಲ್ಲೇ ಹೊಲದಲ್ಲಿ ಪೈರು ತಲೆ ಎತ್ತಿ ನಿಂತಿತ್ತು. ಒಳ್ಳೆಯ ಇಳುವರಿಯಾಗಿ ಮನೆಯಲ್ಲಿ ಧಾನ್ಯ ತುಂಬಿ ತುಳುಕಿತು. ಇದನ್ನು ಗುಬ್ಬಚ್ಚಿಗೆ ತೋರಿಸಿದ ಬಲರಾಮ, "ಇದೆಲ್ಲಾ ನಿನಗಾಗಿ. ಈಗ ನೀನು ಎಲ್ಲೂ ಹೋಗಬೇಕಾಗಿಲ್ಲ, ಯಾವಾಗಲೂ ನನ್ನೊಂದಿಗೇ ಇರು". ಬಲರಾಮನ ಮಾತುಗಳನ್ನು ಕೇಳಿದ ಗುಬ್ಬಚ್ಚಿ ಸಂತೋಷದಿಂದ ಹಾಡಲು ಪ್ರಾರಂಭಿಸಿತು! [ಒತ್ತು ಸೇರಿಸಲಾಗಿದೆ].

ಇದು ಕೇವಲ ಒಬ್ಬ ಪುಟ್ಟ ಬಾಲಕ ಮತ್ತು ಪಕ್ಷಿಯು ಸ್ನೇಹಿತರಾಗುವ ಬಗ್ಗೆ ಇರುವ ಸುಂದರವಾದ, ಮುಗ್ಧ ಕಥೆಯೇ ಅಥವಾ ಇದು ಬೇರೆ ಏನನ್ನಾದರೂ ಸಾರುತ್ತದೆಯೇ?

ಗುಬ್ಬಚ್ಚಿಯು ಬಲರಾಮನನ್ನು ಗೌರವಾನ್ವಿತ ಮತ್ತು ಜವಾಬ್ದಾರಿಯುತ ವ್ಯಕ್ತಿಯನ್ನಾಗಿ ಮಾಡಿತು. ಆದರೆ ಅದು ಹಾರುವ (ಹಾರಿಹೋಗುವ) ತನ್ನ ಪ್ರವೃತ್ತಿಯನ್ನು ಶಾಶ್ವತವಾಗಿ ಬಿಟ್ಟುಕೊಟ್ಟಿತು. ಅದು ಅಲ್ಲಿಯೇ ಉಳಿಯಲು ಅದಕ್ಕೆ ಧಾನ್ಯದ ಭದ್ರತೆಯು ಬೇಕಾಗಿತ್ತು- ಬಹಳಷ್ಟು ಮಹಿಳೆಯರು ಅನ್ನ ದುಡಿಯುವ ಪುರುಷರನ್ನು "ಮದುವೆಯಾಗಿ" ಬಾಳುವಂತೆ.

ಕಪ್ಪು ಜಿಂಕೆಯನ್ನು ಸೆರೆಹಿಡಿದ ರಾಜಕುಮಾರನ ಕುರಿತ ಮತ್ತೊಂದು ಕಥೆಯಲ್ಲಿ, ಜಿಂಕೆಯ ಜೊತೆಗಾರ್ತಿ- ಹೆಣ್ಣು ಜಿಂಕೆ - ರಾಜಕುಮಾರನ ಮುಂದೆ ಅಳುತ್ತದೆ. ಗಂಡು ಜಿಂಕೆಯ ಮೇಲಿನ ಹೆಣ್ಣು ಜಿಂಕೆಯ ಪ್ರೀತಿಯ ತೀವ್ರತೆಯನ್ನು ಕಂಡ ರಾಜಕುಮಾರನು ಎಷ್ಟು ಪ್ರಭಾವಿತನಾಗುತ್ತಾನೆಂದರೆ ಅವನು ಜಿಂಕೆಯನ್ನು ಬಿಟ್ಟುಬಿಡುವ ನಿರ್ಧಾರವನ್ನು ತೆಗೆದುಕೊಳ್ಳುತ್ತಾನೆ. ಇಲ್ಲಿ ಕಥೆಯ ನಾಟಕೀಯ ಶಕ್ತಿಯು ಪರಾವಲಂಬಿಯಾಗಿದೆ; ಸ್ತ್ರೀಯರ ಸ್ವಭಾವದ ಭಾಗವಾಗಿರುವ ನೈಸರ್ಗಿಕ ಪ್ರೀತಿ ಮತ್ತು ವಾತ್ಸಲ್ಯದ (ಮಮತೆ) ಮೇಲೆ ಅವಲಂಬಿತವಾಗಿದೆ. ಸ್ಪಷ್ಟವಾಗಿ ಹೇಳುವುದಾದರೆ, ಹೆಣ್ಣುಜಿಂಕೆ ರಾಜಕುಮಾರನೆದುರು ಅಂಗಲಾಚುವುದು ಇಲ್ಲಿ ಸಾಧನೆಯ ಸ್ವರೂಪವನ್ನು ಪಡೆದುಕೊಳ್ಳುವುದಿಲ್ಲ. ತನ್ನ ಸಂಗಾತಿಗಾಗಿ ಅಳುವುದು ಹೆಣ್ಣು ಜಿಂಕೆಯ ಸ್ವಭಾವದಲ್ಲೇ ಇದೆ. ಸಾಧನೆ ಎಂಬುದೇನಿದ್ದರೂ ಹೋರಾಟದಲ್ಲಿದೆ, ಸಂಘರ್ಷಮಯ ಭಾವನೆಗಳಿಂದ ದೂರವಿರುವುದರಲ್ಲಿದೆ ಮತ್ತು ಅಂತಿಮವಾಗಿ ಪರಿಶ್ರಮದಲ್ಲಿದೆ. ಇಲ್ಲಿ ಗಮನಿಸಬೇಕಾದುದೇನೆಂದರೆ, ಜಿಂಕೆ ಹಿಡಿವ ಬಯಕೆಯನ್ನು ಕೈಬಿಟ್ಟು ಜಿಂಕೆಯನ್ನು ಮುಕ್ತಗೊಳಿಸುವ ನಿರ್ಧಾರವನ್ನು ತೆಗೆದುಕೊಳ್ಳುವ ರಾಜಕುಮಾರನು ನಿಜವಾದ ನಾಯಕ. ರಾಜಕುಮಾರನು ತೆಗೆದುಕೊಳ್ಳಬೇಕಾದ ಕಠಿಣ ನೈತಿಕ ನಿರ್ಧಾರದ ಎದುರು ಹೆಣ್ಣು ಜಿಂಕೆಯ ಭಾವನಾತ್ಮಕ ಪ್ರಲಾಪ ಮಸುಕಾಗುತ್ತದೆ.

ಎರಡೂ ಕಥೆಗಳು ಮೇಲ್ನೋಟಕ್ಕೆ ಅರಾಜಕೀಯ ಮತ್ತು ಮುಗ್ಧ ವಿವರಣೆಗಳ ಮೂಲಕ - ಅವು, ಪ್ರಕೃತಿಯ ಬಗ್ಗೆ ಮಾತನಾಡುತ್ತಿರಲಿ ಅಥವಾ ಪ್ರಾಣಿಗಳ ಜೊತೆಗಿನ ಮನುಷ್ಯ- ಸಂಬಂಧಗಳ ಬಗ್ಗೆ ಮಾತನಾಡುತ್ತಿರಲಿ ಅಥವಾ ಇಬ್ಬರ ನಡುವಿನ ಮುಖಾಮುಖಿಯನ್ನು ಒಳಗೊಂಡಿರುವ ಘಟನೆಗಳ ಬಗ್ಗೆ ಮಾತನಾಡುತ್ತಿರಲಿ- ಪುರುಷರು ಮತ್ತು ಮಹಿಳೆಯರಿಗೆ ವಿಧಿಸಲಾದ ನಿಯಮಗಳನ್ನು ಹೇಗೆ ನಿಗದಿಪಡಿಸಬಹುದು ಎಂಬುದನ್ನು ಸೂಚಿಸುತ್ತವೆ.

ಉಪಸಂಹಾರ

ಹಿಂದಿನ ಸರಕಾರಗಳು ಮಹಿಳೆಯರ ಮತ್ತು ಹೆಣ್ಣು ಮಕ್ಕಳ ಸಬಲೀಕರಣಕ್ಕೆ ಶಿಕ್ಷಣವನ್ನು ಒದಗಿಸಲು ಸ್ಪಷ್ಟವಾದ ನೀತಿ ಬದ್ಧತೆಯನ್ನು ಹೊಂದಿದ್ದರ ಹೊರತಾಗಿಯೂ, ಪರಿಸ್ಥಿತಿಯು ಉತ್ತಮ ರೀತಿಯಲ್ಲಿ ಸುಧಾರಿಸಲಿಲ್ಲ ಎಂಬುದು ಭಾಷಾ ಪಠ್ಯಗಳ ವಿಶ್ಲೇಷಣೆಯಿಂದ ಸ್ಪಷ್ಟವಾಗುತ್ತದೆ. ಪುರುಷತ್ವ ಮತ್ತು ಸ್ತ್ರೀತ್ವದ ಸಾಂಪ್ರದಾಯಿಕ ಅರ್ಥಗಳು ಸಕ್ರಿಯ- ನಿಷ್ಕ್ರಿಯ, ಭಾವನಾತ್ಮಕ-ತರ್ಕಬದ್ಧ, ಪ್ರಕೃತಿ-ಸಂಸ್ಕೃತಿ ಮತ್ತು ಅವಲಂಬಿತ ಸ್ವಾಯತ್ತತೆಯ ವಿರೋಧಾಭಾಸಕರವಾದ, ದ್ವಿಮುಖೀ ವರ್ಗೀಕರಣಗಳೊಂದಿಗೆ ಮುಂದುವರಿದಿವೆ.

ಸ್ಪಷ್ಟವಾಗಿ ಹೇಳುವುದಾದರೆ, ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತಗಳಲ್ಲಿ ಲಿಂಗ-ಸೂಕ್ಷ್ಮತೆ ತರಲು ಮಹಿಳೆಯರ ಧ್ವನಿಗಳನ್ನು, ನಿರೂಪಣೆಗಳನ್ನು, ಅನುಭವಗಳನ್ನು ಮತ್ತು ವಿಶ್ವ ದೃಷ್ಟಿಕೋನಗಳನ್ನು ಶೈಕ್ಷಣಿಕ ಮುಖ್ಯವಾಹಿನಿಗೆ ತರಲು ಹೋರಾಡುತ್ತಿರುವವರ ಸಲಹೆ-ಸೂಚನೆಗಳ ಅಗತ್ಯವಿದೆ. ಈ ಜ್ಞಾನದ-ಆಧಾರವಿಲ್ಲದೆ, ಪಠ್ಯಗಳನ್ನು ಪುನಃ ಬರೆಯುವ ಹೊಣೆ ಹೊತ್ತಿರುವವರು, ಬರೀ ಮೇಲ್ಮೈನಲ್ಲಷ್ಟೇ ತೇಪೆ ಹಾಕುವ ಕೆಲಸ ಮಾಡುತ್ತಾರೆ. ಬಾಲಕಿಯರು ದೃಗ್ಗೋಚರವಾಗಿ ಅಥವಾ ಶಾಬ್ದಿಕವಾಗಿ ಪುಸ್ತಕಗಳಲ್ಲಿ ಹೆಚ್ಚು ಬಾರಿ ಪ್ರಸ್ತಾಪಗೊಳ್ಳುವಂತೆ ಅಥವಾ ಸರಳವಾದ ಪಾತ್ರಗಳಾಗಿ ಬರುವಂತೆ ಮಾಡುತ್ತಾರೆ.

ಮಹಿಳೆಯ ಕುರಿತಾದ ಜ್ಞಾನಸೃಷ್ಟಿಗೆ ಕೊಡುಗೆ ನೀಡಿದವರನ್ನು ಪಠ್ಯಪುಸ್ತಕಗಳ ಬರವಣಿಗೆಯ ವಿಷಯದಲ್ಲಿ ಗಣನೆಗೆ ತೆಗೆದುಕೊಂಡಿಲ್ಲ ಎಂಬ ಅಂಶವು ಅಂತಿಮವಾಗಿ, ನಮ್ಮ ಒಂದೂವರೆ ದಶಕದ ಪ್ರಯತ್ನದ ನಂತರವೂ ಧರ್ಮನಿಷ್ಠ ನೀತಿ ಘೋಷಣೆಗಳ ಹಂತವನ್ನು ಮೀರಿ ನಡೆಯದೆ ಇರುವುದಕ್ಕೆ ಅತ್ಯಂತ ಪ್ರಮುಖ ಕಾರಣವಾಗಿರಬಹುದು.

ವಾಸ್ತವವಾಗಿ, ಮುಂದುವರೆಯುವ ಬದಲು, ನಾವೇಕೆ ತೀವ್ರವಾಗಿ ಹಿಂದೆ ಬೀಳುತ್ತಿದ್ದೇವೆ ಎಂಬುದಕ್ಕೆ ಕಾರಣಗಳಾಗಿರಬಹುದು.

***

ಟಿಪ್ಪಣಿಗಳು

---

[i] ಎಸ್ ಭಟ್ಟಾಚಾರ್ಯ, ಜೆ ಬಾರಾ, ಮತ್ತಿತರರು *ಡೆವಲಪ್ಮೆಂಟ್ ಆಫ್ ವುಮೆನ್ಸ್ ಎಜುಕೇಶನ್ ಇನ್ ಇಂಡಿಯಾ: 1850-1920.* ಜೆಎನ್ ಯು, ಕನಿಷ್ಕಾ ಪಬ್ಲಿಕೇಶನ್, 2001 ರಲ್ಲಿ ಎಸ್ ಭಟ್ಟಾಚಾರ್ಯರು ಬರೆದ 'ಪರಿಚಯ'ದಲ್ಲಿ ಉಲ್ಲೇಖಿಸಲಾಗಿದೆ. ಮುಂದೆ ಬರುವ ನವರೋಜಿ ಮತ್ತು ಕೃಷ್ಣರಾವ್ ರವರ ಉಲ್ಲೇಖಗಳನ್ನು ಸಹ ಇದೇ ಮೂಲದಿಂದ ಪಡೆಯಲಾಗಿದೆ.

[ii] ಇಲ್ಲಿ ನಮೂದಿಸಲಾಗಿರುವ ಪಠ್ಯಪುಸ್ತಕಗಳೆಂದರೆ, *ಬಾಲ ಭಾರತಿ ಭಾಗ-3.* ಫೆಬ್ರವರಿ 2000; *ಬಾಲ ಭಾರತಿ ಭಾಗ-5.* ಫೆಬ್ರವರಿ 1994; ಮರು ಮುದ್ರಣ 1999; *ಸರಸ್ ಭಾರತಿ ಭಾಗ-20.* 1998, ಮರು ಮುದ್ರಣ 2001.